ಇನ್ನೊಂದು ಹದಿನೆಂಟು ಸಾವಿರ ಶ್ಲೋಕ ಪ್ರಮಾಣದ ಬೃಹದ್ ವೃತ್ತಿಯನ್ನೂ ಸಹ ಬರೆದಿದ್ದಾನೆ. ಇದು ವಿದ್ವಾಂಸರಿಗಾಗಿ ಇದೆ. ಇದರಲ್ಲಿ ಅನೇಕ ಪ್ರಾಚೀನ ವೈಯಾಕರಣೀಗಳ ಹೆಸರನ್ನು ಹೇಳಿ, ಅವರ ಮತಗಳ ವಿವೇಚನೆಯನ್ನೂ ಸಹ ಮಾಡಿದ್ದಾನೆ. ಇಂಥ ಪೂರ್ವ ವೈಯಾಕರಣಿಗಳಲ್ಲಿ ದೇವನಂದಿ (ಜೈನೇಂದ್ರ), ಶಾಕಟಾಚಾರ್ಯ ಮತ್ತು ದುರ್ಗಸಿಂಹ (ಕಾತಂತ್ರ ವೃತ್ತಿಕಾರ) ಇವರೂ ಇದ್ದಾರೆ. ಅಲ್ಲದೆ ಯಾಸ್ಕ, ಗಾರ್ಗ್ಯ, ಪಾಣಿನಿ, ಪತಂಜಲಿ, ಭರ್ತೃಹರಿ, ವಾಮನ, ಜಯಾದಿತ್ಯ, ಕ್ಷೀರಸ್ವಾಮಿ, ಭೋಜ ಮೊದಲಾದವರೂ ಇದ್ದಾರೆ. ಉದಾಹರಣೆಗಳಲ್ಲಿಯೂ ಬಹಳಷ್ಟು ಮೌಲಿಕತೆಯೂ ಕಂಡು ಬರುತ್ತದೆ. ವಿಧಿ – ವಿಧಾನಗಳಲ್ಲಿ ಕರ್ತೃವು ತನ್ನ ಕಾಲದವರೆಗಿನ ಭಾಷಾತ್ಮಕ ವಿಕಾಸವನ್ನು ಸಮಾವೇಶಗೊಳಿಸಲು ಪ್ರಯತ್ನ ಮಾಡಿದ್ದಾನೆ. ಇದು ಐತಿಹಾಸಿಕ ದೃಷ್ಟಿಯಿಂದ ಬಹು ಮಹತ್ವಪೂರ್ಣವಾಗಿದೆ. ಉಗಾದಿ ಸೂತ್ರಗಳ ಮೇಲೆಯೂ ಕರ್ತೃವಿನ ಸ್ವೋಪಜ್ಞ ವಿವರಣವಿದೆ. ಅದರಂತೆ ಲಿಂಗಾನುಶಾಸನ ಪದ್ಯಾತ್ಮಕ ರಚನೆಯ ಮೇಲೆಯೂ ಸಹ ಇದೆ. ಕರ್ತೃವು ಸ್ವತಃ ಒಂದು ಲಘು ಮತ್ತು ಇನ್ನೊಂದು ಬೃಹತ್ ನ್ಯಾಸವನ್ನೂ ಸಹ ಬರೆದಿದ್ದನು. ಅದರ ಪ್ರತಿಗಳೂ ಕೂಡ ದೊರೆಯುತ್ತದೆ. ಬೃಹತ್ ನ್ಯಾಸದ ಪ್ರಮಾಣವು ಒಂಭತ್ತು ಸಾವಿರ ಶ್ಲೋಕವೆಂದು ಹೇಳಲಾಗುತ್ತದೆ. ಆದರೆ ಸಧ್ಯಕ್ಕದು ಕೇವಲ ಭಿನ್ನ ೮– ೯ ಪಾದಗಳಲ್ಲಿ ೩೪೦೦ ಸೂತ್ರ ಪ್ರಮಾಣದಲ್ಲಿ ದೊರೆಯುತ್ತದೆ. ಹೀಗೆ ಈ ಸಮಸ್ತ ವ್ಯಾಕರಣವು ಒಂದೂ ಕಾಲು ಲಕ್ಷಶ್ಲೋಕ ಪ್ರಮಾಣವಾಗಿ ಬೆಳೆದು ನಿಂತಿದೆ. ಸುಮಾರು ಇಪ್ಪತ್ತು ಬಹು ದೊಡ್ಡ ಗಾತ್ರದ ಇತರ ಗ್ರಂಥಗಳನ್ನು ರಚಿಸಿದ ಈತನ ಇಷ್ಟು ವಿಶಾಲ ಪ್ರಮಾಣದ ಕೃತಿಯನ್ನು ಕಂಡು ನಮ್ಮಂಥ ಸಾಮಾನ್ಯ ಮನುಷ್ಯರ ಬುದ್ಧಿಯು ಚಕಿತವಾಗದೆ ನಿಲ್ಲುವುದಿಲ್ಲ ಇಷ್ಟಕ್ಕೇನೆ ಈ ವ್ಯಾಕರಣ – ಸಾಮಗ್ರಿಯು ಸಮಾಪ್ತಿಗೊಳ್ಳುವುದಿಲ್ಲ. ಹೇಮಚಂದ್ರನು ತನ್ನ ದ್ವ್ಯಾಶ್ರಯಕಾವ್ಯದ ಮೊದಲಿನ ಇಪ್ಪತ್ತು ಸರ್ಗಗಳಲ್ಲಿ ಈ ವ್ಯಾಕರಣದ ಕ್ರಮಬದ್ಧ ಉದಾಹರಣೆಗಳನ್ನು ಉಪಸ್ಥಿತಗೊಳಿಸಿದ್ದಾನೆ. ಇಂಥ ಕೃತಿಯನ್ನು ಕುರಿತು ಅನ್ಯ ಲೇಖಕರು ಟೀಕೆ – ಟಿಪ್ಪಣೆಗಳನ್ನು ಬರೆಯಲು ಅವಕಾಶವು ಉಳಿಯುವುದಿಲ್ಲ. ಆದರೂ ಇದರ ಮೇಲೆ ಮುನಿದೆಶೇಖರ ಕೃತ ಲಘೂ ವೃತ್ತಿಢುಂಢಿಕಾ, ಕನಕಪ್ರಭ ರಚಿಸಿದ ಲಘೂನ್ಯಾಸದ ಮೇಲೆ ದುರ್ಗ ಪದ ವ್ಯಾಖ್ಯಾ, ವಿದ್ಯಾಕರ ಕೃತ ಬೃಹದ್ – ವೃತ್ತಿ ದೀಪಿಕಾ, ಘನಚಂದ್ರ ಕೃತ ಲಘುವೃತ್ತಿ ಅವಚೂರಿ ಹಾಗೂ ಜಿನಸಾಗರ ಕೃತ ದೀಪಿಕಾ ಮೊದಲಾದ ವಿವಿಧ ಪ್ರಕರಣಗಳ ಟೀಕೆಗಳು ಇವೆ. ಇದರಿಂದ ಈ ಕೃತಿಯ ವಿಷಯದಲ್ಲಿ ವಿದ್ವಾಂಸರಲ್ಲಿರುವ ಆದರ, ಲೋಕ ಪ್ರಚಾರ, ಪ್ರಸಿದ್ಧಿ ಇವುಗಳ ಕಲ್ಪನೆಯು ಬರುವಂತಿದೆ.

ಇವಲ್ಲದೆ ಇನ್ನೂ ಅನೇಕ ಸಂಸ್ಕೃತ ವ್ಯಾಕರಣಗಳು ಇವೆ. ಅಂಥವುಗಳಲ್ಲಿ ಮಲಯಗಿರಿ ಕೃತ ಶಬ್ದಾನುಶಾಸನವು ಒಂದಾಗಿದೆ. ಇದಕ್ಕೆ ವ್ಯಾಕರಣವೆಂದು ಹೆಸರು. ಇದು ಸ್ವೋಪಜ್ಞ ಟೀಕೆ ಸಹಿತ ಇದೆ. ಇದರಂತೆ ದಾನವಿಜಯ ಕೃತ ಶಬ್ದ ಭೂಷಣ ಮೊದಲಾದವುಗಳೂ ಉಲ್ಲೇಖನೀಯವಾಗಿವೆ. ಅದರೆ ಇವು ಮೊದಲಿನ ಗ್ರಂಥಗಳ ಅನುಕರಣಗಳೇ ಆಗಿವೆ. ರಚನೆಯ ವಿಷಯದಲ್ಲಾಗಲೀ, ಇನ್ನಿತರ ಸಂಗತಿಗಳಲ್ಲಾಗಲಿ ಮೌಲಿಕತೆಯು ಕಂಡು ಬರುವುದಿಲ್ಲ.

ಛಂದಃ ಶಾಸ್ತ್ರ – ಪ್ರಾಕೃತ :–

ಜೈನ ಪರಂಪರೆಯಲ್ಲಿ ಉಪಲಬ್ಧ ಛಂದಃ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ನಂದಿತಾಢ್ಯನು ರಚಿಸಿದ ಗಢಾ ಲಕ್ಷಣ ಎಂಬುದು ಪ್ರಾಕೃತ ವ್ಯಾಕರಣಗಳಲ್ಲಿ ಚಂಡ ಕೃತ ಪ್ರಾಕೃತ – ಲಕ್ಷಣಕ್ಕೆ ಸಮವಾಗಿ ಸರ್ವ ಪ್ರಾಚೀನವೆಂದು ಗೊತ್ತಾಗುತ್ತದೆ. ಗ್ರಂಥದಲ್ಲಿ ಕರ್ತೃವಿನ ಹೆಸರಿನ ಹೊರತಾಗಿ ಅದರ ರಚನಾಕಾಲ ಇತ್ಯಾದಿಗಳ ಬಗ್ಗೆ ಯಾವ ಉಲ್ಲೇಖವೂ ಇಲ್ಲ. ತರುವಾಯದಲ್ಲಿ ಆಗಿಹೋದ ಲೇಖಕರು ಈತನ ಹೆಸರನ್ನು ಉಲ್ಲೇಖ ಮಾಡಿದ್ದರೆ. ಅದರಿಂದ ಕಾಲನಿರ್ಣಯ ಮಾಡಬಹುದಿತ್ತು. ಅಂದರೂ ಕರ್ತೃವಿನ ಹೆಸರು, ಅವನ ಪ್ರಾಕೃತ ಭಾಷೆ, ಗ್ರಂಥದ ವಿಷಯ ಮತ್ತು ರಚನಾ ಶೈಲಿ ಇವುಗಳಿಂದ ಇದು ಅತ್ಯಂತ ಪ್ರಾಚೀನ ಕೃತಿಯೆಂದು ಅನುಮಾನ ಮಾಡಲಾಗುತ್ತದೆ. ಆರಂಭದಲ್ಲಿ ಗಾಥಾಗಳ ಮಾತ್ರೆ, ಅಂಶ ಇವುಗಳ ಸಾಮಾನ್ಯ ಗುಣಗಳ ವಿಧಾನವನ್ನು ಮಾಡಲಾಗಿದೆ. ಇವುಗಳಲ್ಲಿ ಶರ ಮೊದಲಾದ ಸಂಜ್ಞೆಗಳ ಪ್ರಯೋಗವು ಪಿಂಗಲ, ವಿರಹಾಂಕ ಮೊದಲಾದ ಛಂದಶಾಸ್ತ್ರಗಳ ವಿವರಣೆಗಿಂತ ಭಿನ್ನವಾಗಿ ಕಂಡು ಬರುತ್ತದೆ. ತರುವಾಯ ಗಾಥೆಗಳ ಪಥ್ಯಾ, ವಿಪುಲಾ ಮತ್ತು ಚಪಲಾ ಎಂಬ ಭೇದಗಳನ್ನು ಹೇಳಿದೆ. ಅಲ್ಲದೆ ಚಪಲಾದಲ್ಲಿ ಮೂರು ಪ್ರಭೇದಗಳನ್ನು ಹೇಳಿ ಉದಾಹರಣೆಗಳನ್ನು ಸಹ ಕೊಡಲಾಗಿದೆ. ತಿರುಗಿ ಇನ್ನೊಂದು ಪ್ರಕಾರದಿಂದ ವರ್ಣಗಳ ಹ್ರಸ್ವ – ದೀರ್ಘಗಳ ಆಧಾರದಿಂದ ಗಾಥೆಗಳನ್ನು ವಿಪ್ರಾ, ಕ್ಷತ್ರಿಯಾ ವೈಶ್ಯಾ ಮತ್ತು ಶೂದ್ರಾ ಎಂಬ ನಾಲ್ಕು ಭೇದಗಳನ್ನೂ ಅವುಗಳ ಉದಾಹರಣೆಗಳನ್ನು ಹೇಳಿದೆ. ಇದಾದ ಮೇಲೆ ಅಕ್ಷರ ಸಂಖ್ಯೆಗಳಿಗನುಸರಿಸಿ ಗಾಥಾಗಳ ಇಪ್ಪತ್ತಾರು ಭೇದಗಳನ್ನು ಕಮಲಾ ಆದಿ ಹೆಸರುಗಳು ಸಹ ಉದಾಹರಣೆಗಳೊಂದಿಗೆ ವಿವರಿಸಿದೆ. ಈ ವಿವರಣದಲ್ಲಿ ಅವುಗಳ ಲಕ್ಷಣ, ಗಾಥೆಯ ಲಘುತ್ವ ಹಾಗೂ ಗುರುತ್ವಗಳ ತುಲನೆ, ಪ್ರಸ್ತಾರ ಸಂಖ್ಯಾನಕ್ಷತ್ರ ಗ್ರಹ ಆದಿ ಪ್ರತ್ಯಯಗಳನ್ನು ಹೇಳಿದೆ. ಕೊನೆಯಲ್ಲಿ ಇ ಗಾಹೆಗಳಲ್ಲಿ ಮಾತ್ರೆಗಳ ಹೆಚ್ಚು ಕಡಿಮೆಯಿಂದ ಉತ್ಪನ್ನವಾಗುವ ಗಾಥಾ, ವಿಗಾಥಾ, ಉದ್ಗಾಥಾ, ಗಾಥಿನೀ

ಮತ್ತು ಸ್ಕಂಧಕ ಈ ಪ್ರಭೇದಗಳನ್ನು ತಿಳಿಸಿ ಹೇಳಲಾಗಿದೆ. ಇದರಲ್ಲಿ ಮೊದಲಿನ ಮೂರು ಹೆಸರುಗಳು ಹೇಮಚಂದ್ರ ಮೊದಲಾದವರು ಪ್ರಯೋಗಿಸಿದ ಉಪಗೀತಿ, ಉದ್ಗೀತಿ ಮತ್ತು ಗೀತಿ ನಾಮಗಳ ಅಪೇಕ್ಷೆಯಿಂದ ಹೆಚ್ಚು ಪ್ರಾಚೀನವೆಂದು ಗೊತ್ತಾಗುತ್ತದೆ.

ಸುಮಾರು ಎಪ್ಪತ್ತು ಗಾಥೆಗಳಲ್ಲಿ ಪೂರ್ಣಗೊಂಡ ಗ್ರಂಥದ ಈ ವಿಷಯವು ಅದರ ಭಿನ್ನ ಮತ್ತು ಮೌಲಿಕ ಅಂಶಗಳನ್ನು ವ್ಯಕ್ತಪಡಿಸುತ್ತದೆ. ಆದರೆ ಡಾ. ವೇಲಂಕರರು ಸಂಪಾದಿಸಿದ ಪಾಠದಲ್ಲಿ ೯೬ ಗಾಥೆಗಳು ಇವೆ. ಹೆಚ್ಚಿನ ಗಾಥೆಗಳಲ್ಲಿ ಗಾಥೆಗಳ ಕೆಲವೊಂದು ಉದಾಹರಣೆಗಳು ಹಾಗೂ ೭೫ ನೆಯ ಗಾಹೆಯಿಂದ ಮುಂದಿನ ಭಾಗದಲ್ಲಿ ಪದ್ಧಡಿಯಾ ಮೊದಲಾದ ಅಪಭ್ರಂಶ ಛಂದಗಳ ಲಕ್ಷಣ ಮತ್ತು ಉದಾಹರಣೆಗಳು ಇವೆ. ಇವನ್ನು ವಿದ್ವಾಂಸರಾದ ಸಂಪಾದಕರು ಮೂಲ ಗ್ರಂಥದ ಭಾಗವೆಂದು ಮನ್ನಿಸುವುದಿಲ್ಲ ; ಸಕಾರಣವಾಗಿ ಅವುಗಳನ್ನು ಹಿಂದಿನಿಂದ ಜೋಡಿಸಿದ ಗಾಥಗಳೆಂದು ಸಿದ್ಧಮಾಡಿದ್ದಾರೆ. ಆದರೆ ಅವರು ಎರಡು ಗಾಥೆಗಳನ್ನು ಮೌಲಿಕ ವೆಂದು ಮನ್ನಿಸಿ, ಅವುಗಳ ವಿಷಯದಲ್ಲಿ ಕೆಲವೊಂದು ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ. ಅವುಗಳ ವಿಷಯದಲ್ಲಿ ಇಲ್ಲಿ ವಿಚಾರಿಸುವ ಆವಶ್ಯಕತೆಯು ಇದೆ. ೩೮ ನೆಯ ಪದ್ಯದಲ್ಲಿ ಗಾಥೆಗಳ ಹತ್ತು ಭೇದಗಳನ್ನು ಹೇಳಿದ್ದಾರೆ. ಆದರೆ ನಿಜವಾಗಿಯೂ ಭೇದಗಳು ಒಂಭತ್ತು ಮಾತ್ರ ಆಗುತ್ತವೆ. ಹತ್ತನೆಯದಾದ ಮಿಶ್ರ ಎಂಬ ಭೇದವು ಅಲ್ಲಿ ಆಗುವುದೇ ಇಲ್ಲ ಅದಕ್ಕೆ ಕೊಟ್ಟ ಉದಾಗರಣೆಯು ಅದು ಮಿಶ್ರದ ಯಾವ ಉದಾಹರಣೆಯೂ ಆಗಿಲ್ಲ. ಅದನ್ನು ಸಂಪಾದಕನಂತೂ ಪ್ರಕ್ಷಿಪ್ತವೆಂದು ಅನುಮಾನ ಮಾಡಿಯೇ ಇದ್ದಾನೆ. ನನ್ನ ಮತಕ್ಕೆ ಅನುಸರಿಸಿ ಹತ್ತು ಭೇದಗಳನ್ನು ಹೇಳುವ ಗಾಥೆಯನ್ನೂ ಸಹ ಪ್ರಕ್ಷಿಪ್ತವೆಂದು ತಿಳಿಯಲಿಕ್ಕೆ ಬೇಕು. ಮೊದಲು ಒಂಭತ್ತು ಭೇದ ಹಾಗೂ ಲಕ್ಷಣಗಳನ್ನು ಉದಾಹರಣೆಗಳೊಡನೆ ತಿಳಿಸಿದ್ದಾಗಿದೆ. ಆ ಮೇಲೆ ಇಲ್ಲಿ ಪುನಃ ಭೇದಗಳನ್ನು ಹೇಳಿ, ಅದರಲ್ಲೂ ಒಂದು ಅಪ್ರಾಸಂಗಿಕ ಭೇದವನ್ನು ಜೋಡಿಸುವುದರ ಅವಶ್ಯಕತೆಯಿರಲಿಲ್ಲ ಕರ್ತೃವಿನ ಸಂಕ್ಷಿಪ್ತವಾದ ರಚನಾ ಶೈಲಿಯಲ್ಲಿ ಅದಕ್ಕಾಗಿ ಯಾವ ಅವಕಾಶವೂ ಇಲ್ಲ ಈ ಭೇದಗಳ ಮಿಶ್ರರೂಪವೂ ಒಂದು ಆಗಬಹುದೆಂದು ಭ್ರಾಂತ ಕಲ್ಪನೆಯಿಂದ ಯಾವುನೋ ಓದುಗನೊಬ್ಬನು ಇದನ್ನು ಜೋಡಿಸಿ, ಗ್ರಂಥವನ್ನು ಪುರ್ಣಗೊಳಿಸುವುದು ಉಚಿತವೆಂದು ತಿಳಿದನು. ಅಲ್ಲದೆ ತಮ್ಮ ಮನಸ್ಸಿಗೆ ಬಂದಂತೆ ಯೋಗ್ಯವಲ್ಲದ ಆ ಉದಾಹರಣೆಯನ್ನು ಕೊಟ್ಟು ಪೂರೈಸಿದನು.

೩೧ ನೆಯ ಗಾಥಾದಲ್ಲಿ ವೇಶ್ಯೆಯರ ಸ್ನೇಹ ಕಾಮುಕರ ಸತ್ಯಗಳು ನಿಜವಾದವುಗಳಲ್ಲಿ ; ಅದರಂತೆಯೇ ನದಿತ್ಯಾಢದ ಮುಖಾಂತರ ಪ್ರಾಕೃತದಲ್ಲಿ ಜೂ, ಹೂ, ತೂ ಗಳು ಇರುವವು. ಸ್ವತಃ ಗ್ರಂಥಕಾರನ ಊ ಅನುಚಿತ ಉಪಮೆಗಳನ್ನು ಕುರಿತು ಡಾ. ವೇಲಂಕರನು ಸ್ವಾಭಾವಿಕವಾಗಿ ಆಶ್ಚರ್ಯವನ್ನು ಪ್ರಕಟಿಸಿದ್ದಾನೆ. ಅಂದರೂ ಗ್ರಂಥದ ಮೌಲಿಕ ಭಾಗವೆಂದು ಅದಕ್ಕೆ ಒಂದು ಕಾರಣವನ್ನೂ ಕೊಡದೆ ಇಲ್ಲ. ಗ್ರಂಥಕಾರನು ಜೈನ ಯತಿಯಾದುದರಿಂದ ಆಗ ಮೋಕ್ತ ಗಾಥಾ ಛಂದದ ಪಕ್ಷಪಾತಿಯಾಗಿದ್ದನು. ಅಲ್ಲದೆ ಅಪಭ್ರಂಶ ಭಾಷೆ ಮತ್ತು ಛಂದಗಳ ವಿಷಯದಲ್ಲಿ ತೀರ ತಿರಸ್ಕಾರ ದೃಷ್ಟಿಯುಳ್ಳವನಾಗಿದ್ದನು. ಆದರೆ ನನ್ನ ಅನುಮಾನದಂತೆ ಈ ಗಾಥೆಯೂ ಕೂಡ ಗ್ರಂಥದ ಮೂಲಭಾಗವಲ್ಲ ಮತ್ತು ಅದು ಅಪಭ್ರಂಶವನ್ನು ತಿರಸ್ಕರಿಸುವ ಬಗೆಯೂ ಅಲ್ಲ, ಅಂದರೂ ಅದರ ವಿಶೇಷ ಪಕ್ಷಪಾತಿಯೊಬ್ಬನು ಅದನ್ನು ಜೋಡಿಸಿದಂತೆ ಇದೆ. ಅವನಿಗೆ ತನ್ನ ಕಾಲದಲ ಲೋಕಪ್ರಿಯ ಹಾಗೂ ವಾಸ್ತವಿಕ ಅಪಭ್ರಂಶದ ರೂಪಗಳ ಅಭಾವವನ್ನು ಈ ಕೃತಿಯಲ್ಲಿ ಕಂಡು ಅಸಮಾಧಾನವಗಿರಬೇಕು. ಅವನು ಕರ್ತೃವಿನ ಮೇಲೆ ವ್ಯಂಗ್ಯ ನುಡಿಯಲ್ಲಿ, ಅವನ ಪ್ರಾಕೃತವೊಂದು ವೇಶ್ಯೆ ಮತ್ತು ಕಾಮುಕರಿಗೆ ಸಮಾನವೆಂದು ಆರೋಪಿಸಿದನು. ಪ್ರಯೋಗ ಪ್ರಿಯತೆ, ಸತ್ಯತೆಗಳು ಇಲ್ಲದವುಗಳೆಂದೂ ಸಾರಿದನು. ಈ ಪ್ರಕಾರ ಮೇಲೆ ತೋರಿಸಿದ ಪದ್ಯದ ಅನೌಚಿತ್ಯ ದೋಷವು ಪುಷ್ಟಿಕರವಾದ ಗುಣದಲ್ಲಿ ಪರಿವರ್ತನಗೊಳ್ಳುತ್ತದೆ. ಗ್ರಂಥಕರ್ತನು ಅಪಭ್ರಂಶದ ವಿಷಯದಲ್ಲಿ ಅನುಚಿತ ಹಾಗೂ ಅಪ್ರಾಸಂಗಿಕ ವಿದ್ವೇಷದ ಅಪರಾಧದಿಂದ ಮುಕ್ತನಾಗುತ್ತಾನೆ. ಈ ಗ್ರಂಥದ ಎರಡು ಟೀಕೆಗಳು ಲಭಿಸಿವೆ. ಒಂದು ರತ್ನಚಂದ್ರನು ರಚಿಸಿದುದು ಇನ್ನೊಂದು ಯಾವನೋ ರಚಿಸಿದ ಅವಚೂರಿಯು. ಈ ಎರಡರಲ್ಲಿಯೂ ಸಮಸ್ತ ಪ್ರಕ್ಷಿಪ್ತವೆಂದು ಅನುಮಾನಿಸುವಂಥ ಗಾಥೆಗಳನ್ನೆಲ್ಲ ಸ್ವೀಕರಿಸಲಾಗಿದೆ. ಇದರಿಂದ ಈ ಭಾಗವು ಅವರ ಪೂರ್ವದಲ್ಲಿಯೇ ಸಮಾವೇಶವಾಗುತ್ತೆಂದು ತಿಳಿಯುತ್ತದೆ. ಉಳಿದ ಪ್ರಾಚೀನ ಪ್ರತಿಗಳ ಅವಶ್ಯಕತೆಯೂ ಬಹಳ ಮಹತ್ವದ್ದಾಗಿದೆ.

ಪ್ರಾಕೃತದಲ್ಲಿ ಛಂದಃ ಶಾಸ್ತ್ರ ಸರ್ವಾಂಗೀಣ ನಿರೂಪಣೆಯನ್ನು ಮಾಡುವಂಥ ಸುಪ್ರಾಚೀನ ಕವಿಯು ಸ್ವಯಂಭುವು. ಅವನ ಪಉಮಚರಿಉ ಮತ್ತು ಹರಿವಂಶ ಚರಿಉ ಎಂಬ ಅಪಭ್ರಂಶ ಪುರಾಣಗಳ ಪರಿಚಯವನ್ನು ಈ ಮೊದಲು ಮಾಡಿಕೊಡಲಾಗಿದೆ. ಅದಕ್ಕನುಸರಿಸಿ ಅವನ ಗ್ರಂಥರಚನಾ ಕಾಲವು ೭ – ೮ ನೆಯ ಶತಮಾನ ವೆಂದು ಸಿದ್ಧವಾಗುತ್ತದೆ. ಸ್ವಯಂಭೂ ಛಂದಸ್ಸನ್ನು ಈಗಲೂ ಶೋಧಿಸಲಾಗಿದೆ. ಅದರ ಒಂದೇ ಒಂದಾದ ಹಸ್ತಲಿಖಿತ ಪ್ರತಿಯಲ್ಲಿ ಪ್ರಾರಂಭದ ೨೨ ಪತ್ರಗಳು ದೊರಕದೆ ಇರುವುದರಿಂದ ಗ್ರಂಥದ ಅಷ್ಟು ಭಾಗವು ಅನುಪಲಬ್ಧವಾಗಿದೆ. ಈ ಗ್ರಂಥವು ಮುಖ್ಯವಾಗಿ ಎರಡು ಭಾಗಗಳಲ್ಲಿ

ವಿಭಾಗ ಹೊಂದಿದೆ. ಅದರಲ್ಲಿ ಒಂದು ಪ್ರಾಕೃತ ಇನ್ನೊಂದು ಅಪಭ್ರಂಶ ವಿಷಯಗಳನ್ನು ಒಳಗೊಂಡಿವೆ. ಪ್ರಾಕೃತ ಛಂದದ ನಿರೂಪಣೆಯನ್ನು ಮೂರು ಪರಿಚ್ಛೇದಗಳಲ್ಲಿ ಮಾಡಲಾಗಿದೆ. ಆದಿ ವಿಧಿ, ಅರ್ಧಸಮ ಮತ್ತು ವಿಸಮವೃತ್ತಗಳೆಂದು ಆ ಪರಿಚ್ಛೇದಗಳಾಗಿವೆ. ಅಪಭ್ರಂಶದ ನಿರೂಪಣೆಯು ಉಚ್ಛಾಹ ವು, ಛಪ್ಪಾಜಾತಿ, ಚಉಪ್ಪಅ, ಶೇಷ ದ್ವಿಪದಿ ಮತ್ತು ಉತ್ಥಕ ಮೊದಲಾದ ಕ್ರಮದಲ್ಲಿ ಇದೆ. ಈ ಪ್ರಕಾರ ಇದರಲ್ಲಿ ಒಟ್ಟು ಒಂಭತ್ತು ಪ್ರಕರಣಗಳಿವೆ. ಪ್ರಾಕೃತ ಛಂದದಲ್ಲಿ ಪ್ರಥಮ ಪರಿಚ್ಛೇದದೊಳಗೆ ಶಕ್ವರಿಯೇ ಮೊದಲಾದ ೧೩ ಪ್ರಕಾರದ ೬೩ ಛಂದಗಳ ನಿರೂಪಣೆಯು ಇದೆ. ಇದರಲ್ಲಿ ಹದಿನಾಲ್ಕು ಅಕ್ಷರಗಳಿಂದ ೨೬ ಅಕ್ಷರಗಳ ವರೆಗೆ ಇರುವ ನಾಲ್ಕು ಚರಣಗಳಿರುತ್ತವೆ. ಒಂದರಿಂದ ಹದಿಮೂರು ಅಕ್ಷರಗಳ ವರೆಗಿನ ವೃತ್ತಗಳ ಸ್ವರೂಪವನ್ನು ಪ್ರಾರಂಭದಲ್ಲಿ ಹೇಳಿರಬೇಕು. ಅದು ಗ್ರಂಥದ ಅನುಪಲಬ್ಧ ಭಾಗವಾಗಿದೆ. ಇದಕ್ಕಿಂತ ಹೆಚ್ಚಿನ ಅಕ್ಷರಗಳ ವೃತ್ತವನ್ನು ದಂಡಕವೆಂದು ಹೇಳಲಾಗಿದೆ. ಎರಡನೆಯ ಪರಿಚ್ಛೇದದಲ್ಲಿ ವೇಗವತೀ ಮೊದಲಾದ ಅರ್ಧಸಮ ವೃತ್ತಗಳ ನಿರುಪಣೆಯು ಇದೆ. ಇವುಗಳ ಪ್ರಥಮ ಹಾಗೂ ದ್ವಿತಿಯ ಚರಣಗಳು ಪರಸ್ಪರ ಭಿನ್ನ ಹಾಗೂ ಮುರು ನಾಲ್ಕನೆಯ ಚರಣಗಳು ಸಮವಾಗಿರುತ್ತವೆ. ಮೂರನೆಯ ಪರಿಚ್ಛೆದದಲ್ಲಿ ಉದ್ಗತವೇ ಮೊದಲಾದ ವಿಷಮ ವೃತ್ತಗಳ ವರ್ಣನೆಯು ಇದೆ. ಇವುಗಳ ನಾಲ್ಕೂ ಚರಣಗಳು ಪರಸ್ಪರ ಭಿನ್ನ ವಾಗಿರುತ್ತದೆ. ಅಪಭ್ರಂಶ ಛಂದಸ್ಸಿನಲ್ಲಿ ಮೊದಲು ಉತ್ಸಾಹ, ದೊಹಾ ಮತ್ತು ಅದರ ಭೇದ, ಮಾತ್ರಾ, ರಡ್ಡಾ ಮೊದಲಾದ ಹನ್ನೆರಡು ವೃತ್ತಗಳ ವಿವರ ವಿದೆ. ಇನ್ನು ಐದನೆಯ ಪರಿಚ್ಛೇದದಲ್ಲಿ ಆರು ಪದಗಳುಳ್ಳ ಧ್ರುವಕ, ಜಾತಿ, ಉಪಜಾತಿ ಮೊದಲಾದ ೨೪ ಛಂದಗಳ ವಿಷಯ ವಿದೆ. ಆರನೆಯದಲ್ಲಿ ಒಂದು ನೂರು ಅರ್ಧಸಮ ಮತ್ತು ಎಂಟು ಸರ್ವಸಮ ಇಂಥ ೧೨ ಚತುಷ್ಪದೀ ಧ್ರುವಕ ಛಂದಗಳನ್ನು ಕುರಿತು ಹೇಳಿದೆ. ಏಳನೆಯದರಲ್ಲಿ ೪೦ ಪ್ರಕಾರದ ದ್ವಿಪದಿಗಳ ವಿಷಯವಿದೆ. ಎಂಟನೆಯದರಲ್ಲಿ ನಾಲ್ಕರಿಂದ ಹತ್ತು ಮಾತ್ರೆಗಳವರೆಗೆ ಇರುವ ಉಳಿದ ಹತ್ತು ದ್ವಿಪದಿಗಳ ವಿವರ ಬಂದಿದೆ. ಕೊನೆಯಲ್ಲಿ ಉತ್ಥವಕ, ಧ್ರುವಕ, ಛಡ್ಡಾನಿಕಾ ಮತ್ತು ಘತ್ತಾ ಮೊದಲಾದ ವೃತ್ತಗಳ ನಿರೂಪಣೆಯನ್ನು ಮಾಡಲಾಗಿದೆ.

ಸ್ವಯಂಭೂ – ಛಂದಸ್ಸಿಗೆ ತನ್ನ ವೇ ಆದ ಅನೇಕ ವಿಶೇಷತೆಗಳು ಇವೆ. ಅವುಗಳಲ್ಲಿ ಒಂದಂತೂ ಅದರ ಸಮಸ್ತ ರಚನೆ ಹಾಗೂ ಎಲ್ಲ ಉದಾಹರಣೆಗಳು ಪ್ರಾಕೃತ ಅಪಭ್ರಂಶಾತ್ಮಕವಾಗಿವೆ. ಎರಡನೆಯದು ಅವನು ಮಾತ್ರಾ ಗಣಗಳ ಸಲುವಾಗಿ ತನ್ನ ಮೇಲಿನ ಸಂಜ್ಞೆಗಳೆನಿಸುವಂಥ ದ, ತ, ಚ, ಮೊದಲಾದವುಗಳನ್ನು ಪ್ರಸ್ತುತಗೊಳಿಸಿದ್ದಾನೆ. ಮೂರನೆಯದಾಗಿ ಅವನು ಅಕ್ಷರ ಮತ್ತು ಮಾತ್ರಾ ಗಣಗಳಲ್ಲಿ ಯಾವ ಭೇದವನ್ನೂ

ಮಾಡಲಿಲ್ಲ ; ಅಲ್ಲದೆ ಸಂಸ್ಕೃತ ಅಕ್ಷರ ಗಣ ವೃತ್ತಗಳನ್ನೂ ಸಹ ಪ್ರಾಕೃತದ ಮಾತ್ರಾ ರೂಪದಲ್ಲಿ ತೋರಿಸಿದ್ದಾನೆ. ನಾಲ್ಕನೆಯದಾಗಿ ಸ್ವಯಂಭೂವು ಪಾದದ ಮಧ್ಯದಲ್ಲಿ ಯತಿಯ ಸಂಬಂಧದ ವಿಷಯದಲ್ಲಿ ಎರಡು ಪರಂಪರೆಗಳನ್ನು ಉಲ್ಲೇಖಿಸಿದ್ದಾನೆ. ಅವುಗಳಲ್ಲಿ ಮಾಂಡವ್ಯ, ಭರತ, ಕಾಶ್ಯಪ, ಮತ್ತು ಸೈತವ ಇವರು ಯತಿಯನ್ನು ಮನ್ನಿಸಿಲ್ಲ. ಸ್ವಯಂಭುವು ತಾನು ಇದೇ ಪರಂಪರೆಯವನೆಂದು ಪ್ರಕಟಗೊಳಿಸಿದ್ದಾನೆ. ಇನ್ನು ಐದನೆಯದಾಗಿ ಅವನು ಕೊಟ್ಟ ಉದಾಹರಣೆಗಳು ಅವನ ಕಾಲದ ಪ್ರಾಕೃತಲೋಕ ಸಾಹಿತ್ಯದಲ್ಲಿ ಯಾವ ಧಾರ್ಮಿಕ, ಸಾಂಪ್ರದಾಯಿಕ ಭೇದ – ಭಾವಗಳನ್ನು ಮಾಡದೆ ಸ್ವೀಕರಿಸಿದಂಥವು ಇವೆ. ಇನ್ನೂ ಹೆಚ್ಚು ಉದಾಹರಣೆಗಳ ಜೊತೆಯಲ್ಲಿ ಅವುಗಳ ಕರ್ತೃಗಳ ಉಲ್ಲೇಖವನ್ನೂ ಸಹ ಮಾಡಿದ್ದಾನೆ. ಒಟ್ಟು ಉದಾಹರಣಾತ್ಮಕ ಪದ್ಯಗಳ ಸಂಖ್ಯೆಯು ೨೦೬ ಇದೆ. ಅವುಗಳಲ್ಲಿ ೧೨೮ ಪದ್ಯಗಳು ಪ್ರಾಕೃತದವು. ಉಳಿದವು ಅಪಭ್ರಂಶವಾಗಿವೆ. ಇಲ್ಲಿ ಉಲ್ಲೇಖಿಸಿದ ಕವಿಗಳ ಸಂಖ್ಯೆಯು ೫೮ ಇದೆ. ಅವುಗಳಲ್ಲಿ ಎಲ್ಲಕ್ಕೂ ಹೆಚ್ಚು ಪದ್ಯಗಳ ಕರ್ತೃಗಳು ಸುದ್ಧ ಸಹಾವ (ಶುದ್ಧ ಸ್ವಭಾವ) ಮತ್ತು ಸುದ್ಧಸೀಲರು ಕಂಡು ಬರುತ್ತಾರೆ. ಇವರಿಬ್ಬರೂ ಒಬ್ಬನೇ ಆಗಿದ್ದರೆ. ಆಶ್ಚರ್ಯ ಪಡುವ ಕಾರಣವಿಲ್ಲ. ಉಳಿದವರಲ್ಲಿ ಕಾಲಿದಾಸ, ಗೋವಿಂದ, ಚಉಮುಹ, ಮಯೂರ, ವೇತಾಲ, ಹಾಗೂ ಮೊದಲಾದವರ ಹೆಸರುಗಳು ಪರಿಚಿತವಾಗಿವೆ. ಇನ್ನು ಇಬ್ಬರು ಕವಿಯಿತ್ರಿಯರಾದ ರಹಾ ಮತ್ತು ವಿಜ್ಜಾ ಇವರ ಹೆಸರುಗಳನ್ನು ಗಮನದಲ್ಲಿಡುವಂತಿದೆ. ಅಪಭ್ರಂಶದ ಉದಾಹರಣೆಗಳಲ್ಲಿ ಗೋವಿಂದ ಮತ್ತು ಚತುರ್ಮುಖ ಇವರ ಕೃತಿಗಳಿಗೆ ಪ್ರಧಾನತೆಯಿದೆ. ಅದರಿಂದ ಅವರ ಕ್ರಮವಾಗಿ ಹರಿವಂಶ ಮತ್ತು ರಾಮಾಯಣ ವಿಷಯದ ಗ್ರಂಥಗಳಾಗಿರುವ ಸಂಭವವಿದೆ. ಮೇಲ ತಿಳಿಸಿದ ಪ್ರತಿಯೊಂದು ಪರಿಚ್ಛೇದದ ಅಂತಿಮ ಪದ್ಯದಲ್ಲಿ ಸ್ವಯಂಭೂವು ತನ್ನ ಕೃತಿಯನ್ನು ಪಂಚಂಸಸಾರಭೂತಂ ಎಂದು ಹೇಳಿದ್ದಾನೆ. ಇದರಿಂದ ಈ ರಚನೆಯಲ್ಲಿ ಗಣಗಳ ವಿಧಾನವನ್ನು ದ್ವಿಮಾತ್ರಿಕದಿಂದ ಆರಂಭಿಸಿ ಆರು ಮಾತ್ರಿಕೆಗಳ ವರೆಗೆ ಐದು ಪ್ರಕಾರದಿಂದ ಮಾಡಲಾಗಿದೆಯೆಂಬ ಅಭಿಪ್ರಾಯವಾಗಿದೆ ಎಂಬುದು ಗೊತ್ತಾಗುತ್ತದೆ.

ಕವಿದರ್ಪಣ ಎಂಬ ಹೆಸರಿನ ಪ್ರಾಕೃತ ಛಂದ – ಶಾಸ್ತ್ರದ ಕರ್ತೃವಿನ ಹೆಸರು ಅಜ್ಞಾತವಾಗಿದೆ. ಇದನ್ನು ಒಂದೇ ಒಂದು ಪ್ರಾಟಿಯನ್ನು ಇಟ್ಟುಕೊಂಡು ಸಂಪಾದಿಸಲಾಗಿದೆ. ಈ ಪ್ರತಿಯ ಪ್ರಾರಂಭದ ಹಾಗೂ ಕೊನೆಯ ಪುಟಗಳು ನಷ್ಟವಾಗಿರುವುದರಿಂದ ಎರಡೂ ಮಗ್ಗಲು ಕೃತಿಯು ಅಪೂರ್ಣವಾಗಿದೆ. ಈಗ ಲಭಿಸಿರುವ ಕೃತಿಯ ಭಾಗದಿಂದ ಕರ್ತೃವಿನ ವಿಷಯವೂ ಸಹ ಏನೂ ಗೊತ್ತಾಗುವುದಿಲ್ಲ. ಜೊತೆಗೆ ಸಂಸ್ಕೃತ ಟೀಕೆಯೂ ಲಭಿಸಿರುವುದಾದರೂ ಅದರಿಂದಲೂ ಲೇಖಕನ ವಿಷಯವು ತಿಳಿಯುವುದಿಲ್ಲ

ಅಂದರೂ ನಂದಿಷೇಣ ಕೃತ ಅಜಿತ ಶಾಂತಿಸ್ತವದ ಟೀಕಾಕಾರನಾದ ಜಿನಪ್ರಭ ಸೂರಿಯು ಈ ಗ್ರಂಥದ ನಾಮೋಲ್ಲೇಖ ಮಾಡಿದ್ದಾನೆ. ಅಲ್ಲದೆ ಇದರ ೩೪ ಪದ್ಯಗಳನ್ನೂ ಉದ್ಧರಿಸಿದ್ದಾನೆ. ಇದರಿಂದ ಇದರ ರಚನಾ ಕಾಲವು ವಿಸಂ. ೧೩೬೫ ಕ್ಕಿಂತ ಮುಂಚಿನದೆಂದು ಗೊತ್ತಾಗುತ್ತದೆ. ಗ್ರಂಥದಲ್ಲಿ ರತ್ನಾವಲಿಯ ಕರ್ತೃವಾದ ಹರ್ಷದೇವ, ಹೇಮಚಂದ್ರ, ಸಿದ್ಧರಾಜ ಜಯಸಿಂಹ, ಕುಮಾರಪಾಲ ಮೊದಲಾದವರ ಹೆಸರುಗಳು ಬಂದಿವೆ. ಇದರಿಂದ ಗ್ರಂಥದ ಪೂರ್ವಾವಧಿಯು ೧೩ ನೆಯ ಶತಮಾನವೆಂದು ನಿಶ್ಚಿತಗೊಳ್ಳುತ್ತದೆ. ಅಂತೂ ಈ ಗ್ರಂಥವು ಕ್ರಿ.ಶ. ೧೧೭೨–೧೩೦೮ ರ ಮಧ್ಯದಲ್ಲಿ ಎಂದಾದರೂ ಬರೆದದ್ದು ಇದೆ. ಗ್ರಂಥದಲ್ಲಿ ಆರು ಉದ್ದೇಶಗಳಿವೆ. ಮೊದಲನೆಯ ಉದ್ದೇಶದಲ್ಲಿ ಮಾತ್ರಾ ಮತ್ತು ವರ್ಣಗಳ ವಿಷಯವಿದೆ. ಎರಡನೆಯದರಲ್ಲಿ ಮಾತ್ರಾ ಛಂದಗಳ ವಿವರವು ಬರುತ್ತದೆ. ಮೂರನೆಯದರಲ್ಲಿ ವರ್ಣ ವೃತ್ತಗಳ ವಿಷಯವಿದೆ. ನಾಲ್ಕನೆಯದರಲ್ಲಿ ೨೬ ಜಾತಿಗಳನ್ನೂ ಐದನೆಯದರಲ್ಲಿ ವೈತಾಲೀಯ ಮೊದಲಾದ ೧೧ ಉಭಯ ಛಂದಗಳನ್ನೂ ಆರನೆಯದರಲ್ಲಿ ೬ ಪ್ರತ್ಯಯಗಳ ವರ್ಣನೆಯನ್ನೂ ಮಾಡಲಾಗಿದೆ. ಈ ಪ್ರಕಾರ ಒಟ್ಟು ಎಲ್ಲವೂ ಸೇರಿ ೨೪ ಸಮ, ೧೫ ಅರ್ಧಸಮ ಮತ್ತು ೧೩ ವಿಶ್ರ ಹೀಗಾಗಿ ೫೨ ಪ್ರಾಕೃತ ಛಂದಗಳ ನಿರೂಪಣೆಯು ಇದೆ. ಇದು ಸ್ಪಷ್ಟವಾಗಿಯೂ ಅಪೂರ್ಣವಾಗಿದೆ. ಇದು ಸ್ವಯಂಭೂ ಮತ್ತು ಹೇಮಚಂದ್ರರ ಕೃತಿಗಳ ತರುವಾಯ ವಿಶೇಷವಾಗಿ ರಚನೇಯಾಗಿದೆ. ಆದರೆ ಲೇಖಕನ ಉದ್ದೇಶವು ಸಂಪೂರ್ಣ ಛಂದಸ್ಸನ್ನು ವಿವರಿಸುವುದಾಗಿಲ್ಲ. ಕೆಲವೊಂದು ಸುಪ್ರಚಲಿತ ರೂಪಗಳನ್ನು ಮಾತ್ರ ಪ್ರರೂಪಣ ಮಾಡುವುದಾಗಿದೆ. ಎಂದು ಗೊತ್ತಾಗುತ್ತದೆ. ಉದಾಹರಣೆಗಳ ಸಂಖ್ಯೆಯು ೬೯ ಮಾತ್ರ ಇವೆ. ಇವೆಲ್ಲವೂ ಗ್ರಂಥಕಾರನು ಸ್ವತಃ ನಿರ್ಮಿಸಿದವುಗಳಾಗಿವೆ. ಟೀಕೆಯಲ್ಲಿ ಬೇರೆ ೬೧ ಉದಾಹರಣೆಗಳು ಕಂಡು ಬರುತ್ತವೆ. ಇವುಗಳನ್ನು ಬೇರೆ ಕಡೆಯಿಂದ ಎತ್ತಿಕೊಳ್ಳಲಾಗಿದೆ. ಎರಡನೆಯ ಉದ್ದೇಶದಲ್ಲಿ ಬರುವ ಮಾತ್ರಾ ವೃತ್ತಗಳ ನಿರೂಪಣೆಯು ಬಹಳಷ್ಟು ಹೇಮಚಂದ್ರನನ್ನು ಅನುಸರಿಸಿದೆ. ಆದರೂ ಕೆಲವೊಂದೆಡೆಯಲ್ಲಿ ಸ್ವಲ್ಪ ಮೌಲಿಕತೆಯೂ ಕಂಡು ಬರುತ್ತದೆ.

ಛಂದಃ ಕೋಶದ ಕರ್ತೃವಾದ ರತ್ನಶೇಖರನು ನಾಗಪುರೀಯ ತಪಾಗಚ್ಛದ ಹೇಮ ತಿಲಕ ಸೂರಿಯ ಶಿಷ್ಯನಾಗಿದ್ದನು. ಇವನ ಜನ್ಮವು ಪಟ್ಟಾವಲಿಗೆ ಅನುಸರಿಸಿ ವಿಸಂ. ೧೩೭೨ ರಲ್ಲಿ ಆದುದು ತಿಳಿಯುತ್ತದೆ. ಇವನ ಇನ್ನೆರಡು ಕೃತಿಗಳಾದ ಶ್ರೀಪಾಲಚರಿತ್ರ (ವಿಸ. ೧೪೨೮) ಮತ್ತು ಗುಣಸ್ಥಾನ – ಕ್ರಮಾರೋಹ (ವಿಸಂ. ೧೪೪೭) ಇವು ಪ್ರಕವಾಗಿವೆ. ಗ್ರಂಥದಲ್ಲಿ ಒಟ್ಟು ೭೪ ಪ್ರಾಕೃತ ಮತ್ತು ಅಪಭ್ರಂಶ ಪದ್ಯಗಳಿವೆ. ಇವುಗಳಲ್ಲಿ ಕ್ರಮವಾಗಿ ಲಘು – ಗುರು ಅಕ್ಷರಗಳನ್ನೂ ಮತ್ತು ಅಕ್ಷರ ಗಣಗಳನ್ನೂ, ಎಂಟು ವರ್ಣ

ವೃತ್ತಗಳನ್ನೂ , ೩೦ ಮಾತ್ರಾ ವೃತ್ತಗಳನ್ನೂ ಮತ್ತು ಕೊನೆಯಲ್ಲಿ ಗಾಥಾ ಮತ್ತು ಅದರ ಭೇದ ಪ್ರಭೇದಗಳ ನಿರೂಪಣೆಯನ್ನು ಮಾಡಲಾಗಿದೆ. ಪ್ರಾಕೃತ – ಪಿಂಗಲದಲ್ಲಿ ೪೦ ಮಾತ್ರಾ ವೃತ್ತಗಳು ಕಂಡುಬರುತ್ತವೆ. ಅವುಗಳಿಗಿಂತ ಈ ಗ್ರಂಥದ ೧೫ ವೃತ್ತಗಳು ಸಂಪೂರ್ಣ ಭಿನ್ನ ವಾಗಿದೆ ; ನವೀನವೂ ಆಗಿದೆ. ಇವುಗಳ ಲಕ್ಷಣ ಮತ್ತು ಉದಾಹರಣೆಗಳೆಲ್ಲ ಅಪಭ್ರಂಶದಲ್ಲಿ ಇವೆ. ಒಂದೇ ಪದ್ಯದಲ್ಲಿ ಎರಡರ ಸಮಾವೇಶವನ್ನೂ ಸಹ ಮಾಡಲಾಗಿದೆ. ಗಾಥೆಗಳ ಲಕ್ಷಣ ಮೊದಲಾದವುಗಳು ಪ್ರಾಕೃತ ಗಾಥೆಗಳಲ್ಲಿ ಇವೆ. ಅಪಭ್ರಂಶ ಛಂದಗಳ ನಿರೂಪಕ ಪದ್ಯಗಲಲ್ಲಿ ಬಹಳಷ್ಟು ಪದ್ಯಗಳು ಎರಡನೆಯ ಕಡೆಯಿಂದ ಉಧೃತ ಮಾಡಿದ್ದು ಕಂಡು ಬರುತ್ತದೆ. ಯಾಕೆಂದರೆ ಅವುಗಳ ಜೊತೆಯಲ್ಲಿ ಅವುಗಳ ಕರ್ತೃಗಳ ಹೆಸರುಗಳನ್ನು ಗುಲ್ಹ, ಅರ್ಜುನ, ಪಿಂಗಲ, ಎಂದು ಮೊದಲಾಗಿ ಜೋಡಿಸಲಾಗಿದೆ. ಇವುಗಳಲ್ಲಿ ಪಿಂಗಲನ ಹೆಸರಿನಿಂದ ಒಂದು ಅನುಮಾನವನ್ನು ಮಾಡಲಿಕ್ಕೆ ಬರುತ್ತದೆ. ಅದು ಸಹಜವೂ ಆಗಿದೆ. ಛಂದಃಕೋಶದ ಕರ್ತೃವು ಆ ಪದ್ಯಗಳನ್ನು ಉಪಲಬ್ಧ ಪ್ರಾಕೃತ ಪಿಂಗಲದಿಂದಲೇ ತಕ್ಕೊಂಡಿರಬೇಕು. ಆದರೆ ಹಾಗೆ ಆದುದಿಲ್ಲ. ಆ ಪದ್ಯಗಳು ಪ್ರಾಕೃತ ಪಿಂಗಲದಲ್ಲಿ ಲಭಿಸುವುದಿಲ್ಲ. ಕೆಲವೊಂದು ಪದ್ಯಗಳಂತು ಇಲ್ಲಿ ಗುಲ್ಹ ಕವಿ ಕೃತವೂ ಇಲ್ಲಿವೆ ಕರ್ತೃವಿನ ಹೆಸರುಗಳು ಇಲ್ಲದುವೂ ಆಗಿವೆ. ಮತ್ತು ಅವೇ ಪದ್ಯಗಳು ಪ್ರಾಕೃತ ಪಿಂಗಲನ ನಾಮ ನಿರ್ದೇಶ ಸಹಿತ ಉಪಲಬ್ಧವಿವೆ. ಇದರಿಂದ ವಿದ್ವಾನ್ ಸಂಪಾದಕ ಡಾ. ವೇಲಂಕರರು ಇಬ್ಬರೂ ಈ ಪದ್ಯಗಳನ್ನು ಬೇರೆ ಕಡೆಯಿಂದ ತಕ್ಕೊಂಡಿರಬೆಕೇಂದು ಅನುಮಾನಿಸಿದುದು ಯೋಗ್ಯವೇ ಆಗಿದೆ. ಆದರೆ ರತ್ನಶೇಖರನು ಸೌಜನ್ಯದಿಂದ ಅವುಗಳನ್ನು ಇದ್ದಕ್ಕಿದ್ದಂತೆ ಇಟ್ಟಿದ್ದಾನೆ. ಪಿಂಗಲನು ಮೊದಲಿನ ಕರ್ತೃಗಳ ಹೆಸರುಗಳನ್ನು ತೆಗೆದು ಹಾಕಿ, ತನ್ನ ಹೆಸರನ್ನು ಸಮಾವೇಶಗೊಳಿಸಿದ್ದಾನೆ. ಪಿಂಗಲನು ರತ್ನಶೇಖರನ ತರುವಾಯ ಕಾಲದ ಘಟನೆಗಳ ಉಲ್ಲೇಖಗಳು ಇವೆ. ಅದರಿಂದ ಈ ಕೃತಿಯಲ್ಲಿ ರತ್ನಶೇಖರನು ಪಿಂಗಲನ ಕೃತಿಯಿಂದಲೇ ಉದಾಹರಣೆಗಳನ್ನು ಎತ್ತಿಕೊಳ್ಳಬೆಕೇಂದೇನೂ ಇಲ್ಲ. ಹೀಗಾಗಿ ಪೀಂಗಲನಿಂದ ಯಾವ ಭಾಗಗಳನ್ನು ಛಂದಃಕೋಶದಲ್ಲಿ ಉಪಯೋಗಿಸಿದೆಯೆಂದು ಭಾವಿಸಲಾಗುವುದೋ ಆ ಭಾಗಗಳು ಈಗಿರುವ ಪ್ರಾಕೃತ ಪಿಂಗಲನ ಕೃತಿಗಿಂತ ಪೂರ್ವದ ಯಾವುದೋ ಬೇರೆ ಕೃತಿಯಿಂದ ಎತ್ತಿಕೊಂಡಿದಿರಬೆಕೇಂದು ಸಿದ್ಧವಾಗುತ್ತದೆ. ಇನ್ನೂ ಬೇರೆ ಪಿಂಗಲನಿಗೆ ಸಂಬಂಧಿಸಿದ ಉಲ್ಲೇಖಗಳಿಂದಲೂ ಈ ಮಾತು ನಿಶ್ಚಿತ ವಾಗುತ್ತದೆ.

ಸಂಸ್ಕೃತದಲ್ಲಿ ರಚಿತವಾದ ಹೇಮಚಂದ್ರ ಕೃತ ಛಂದೋನುಶಾಸನದ (೧೫ ನೆಯ ಶತಮಾನ) ಉಲ್ಲೇಖವು ಛಂದಚೂಡಾಮಣಿ ಎಂಬ ಹೆಸರಿನಿಂದಲೂ ಆದದಿದೆ. ಈ ಕೃತಿಯೂ ಎಂಟು ಅಧ್ಯಾಯಗಳಲ್ಲಿ

ವಿಭಾಗಗೊಂಡಿದೆ. ಇದರ ಮೇಲೆ ಸ್ವೋಪಜ್ಞ ಟೀಕೆಯೂ ಸಹ ಇದೆ. ಈ ಗ್ರಂಥದಲ್ಲಿ ಹೇಮಚಂದ್ರನು ತನ್ನ ವ್ಯಾಕರಣಾದಿ ಗ್ರಂಥಗಳಲ್ಲಿ ಮಾಡಿದಂತೆಯೇ ಯಥಾಶಕ್ತಿ ತನ್ನ ಕಾಲದವರೆಗೆ ಆವಿಷ್ಕಾರ ಹಾಗೂ ಪೂರ್ವಾಚಾರ್ಯರು ನಿರೂಪಿಸಿದ ಸಮಸ್ತ ಸಂಸ್ಕೃತ , ಪ್ರಾಕೃತ ,ಅಪಭ್ರಂಶ ಛಂದಸ್ಸಿನ ಸಮಾವೇಶವನ್ನು ಮಾಡಿಕೊಡುವ ಪ್ರಯತ್ನ ಮಾಡಿದ್ದಾನೆ ; ಅವು ಅವನ ಕಾಲದಲ್ಲಿ ಪ್ರಚಾರದಲ್ಲಿ ಇರಲಿ ಅಥವಾ ಇರದೆ ಇರಲಿ ಭರತ ಮತ್ತು ಪಿಂಗಲರ ಜೊತೆಯಲ್ಲಿ ಅವನು ಸ್ವಯಂಭೂವನ್ನೂ ಆದರದಿಂದ ಸ್ಮರಿಸಿದ್ದಾನೆ. ಮಾಂಡವ್ಯ, ಭರತ, ಕಾಶ್ಯಪ, ಸೈತವ, ಜಯದೇವ ಮೊದಲಾದ ಪ್ರಾಚೀನ ಛಂದಶಾಸ್ತ್ರ ಪ್ರಣೇತೃಗಳ ಉಲ್ಲೇಖವನ್ನು ಮಾಡಿದ್ದಾನೆ. ಅವನು ಛಂದದ ಲಕ್ಷಣವನ್ನಂತೂ ಸಂಸ್ಕೃತದಲ್ಲಿ ಬರೆದಿದ್ದಾನೆ. ಆದರೆ ಅವುಗಳ ಉದಾಹರಣೆಗಳನ್ನು ಅವನ ಪ್ರಯೋಗಕ್ಕನುಸರಿಸಿ ಸಂಸ್ಕೃತ, ಪ್ರಾಕೃತ ಅಥವಾ ಅಪಭ್ರಂಶದಲ್ಲಿ ಕೊಟ್ಟಿದ್ದಾನೆ. ಉದಾಹರಣೆಗಳು ಅವನ ಸ್ವನಿರ್ಮಿತವಾಗಿವೆ ; ಬೇರೆ ಕಡೆಯಿಂದ ಎತ್ತಿಕೊಂಡವುಗಳಲ್ಲ. ಸ್ವಯಂಭೂ ಛಂದಸ್ಸಿನಲ್ಲಿ ಕಂಡುಬರದಂಥ ಪ್ರಾಕೃತ ಛಂದಸ್ಸಿನ ಹೆಸರೂಗಳನ್ನೂ ಲಕ್ಷಣಗಳನ್ನೂ ಮತ್ತು ಉದಾಹರಣೆಗಳನ್ನೂ ಕೂಡ ಹೇಮಚಂದ್ರನು ನೀಡಿದ್ದಾನೆ. ಸ್ವಯಂಭೂವು ಒಂದರಿಂದ ಹದಿನಾರು ಅಕ್ಷರಗಳ ವೃತ್ತಗಳಲ್ಲಿ ಸುಮಾರು ಒಂದು ನೂರು ಭೇದಗಳನ್ನು ಹೇಳಿದ್ದಾನೆ. ಆ ಸ್ಥಳದಲ್ಲಿ ಹೇಮಚಂದ್ರನು ಅವುಗಳಲ್ಲಿ ೨೮೬ ಭೆದ – ಪ್ರಭೇದಗಳನ್ನು ವಿವರಿಸಿದ್ದಾನೆ. ಇವುಗಳಲ್ಲಿ ದಂಡಕವು ಸಮಾವೇಶವಾಗಿಲ್ಲ. ಸಂಸ್ಕೃತ, ಪ್ರಾಕೃತ ಮತ್ತು ಅಪಭ್ರಂಶಗಳ ಸಮಸ್ತ ಪ್ರಕಾರದ ಛಂದಗಳ ಶಾಸ್ತ್ರೀಯ ಲಕ್ಷಣ ಮತ್ತು ಉದಾಹರಣೆಗಳಿಗಾಗಿ ಈ ಕೃತಿಯು ಮಹಾಕೋಷವಾಗಿದೆ.

ಛಂದಃ ಶಾಸ್ತ್ರ – ಸಂಸ್ಕೃತ :–

ಸಂಸ್ಕೃತದಲ್ಲಿ ಇನ್ನು ಕೆಲವು ಛಂದಸ್ಸನ್ನು ಕುರಿತು ರಚಿಸಿದ ಗ್ರಂಥಗಳು ಕಂಡು ಬರುತ್ತವೆ. ಅಂಥವುಗಳಲ್ಲಿ ನೇಮಿಯ ಪುತ್ರನಾದ ವಾಗ್ಭಟ್ಟ ಕೃತ ಛಂದೋನುಶಾಸನವು ಐದು ಅಧ್ಯಾಯಗಳುಳ್ಳ ಗ್ರಂಥವಾಗಿದೆ. ಅದರ ಉಲ್ಲೇಖವು ಕವ್ಯಾನುಶಾಸನದಲ್ಲಿ ಕಂಡು ಬರುತ್ತದೆ. ಜಯಕೀರ್ತಿಯು ರಚಿಸಿದ ಛಂದೋನುಶಾಸನವು ವಿಸಂ. ೧೧೯೨ ರಲ್ಲಿ ರೂಪುಗೊಂಡ ಕೃತಿಯಾಗಿದೆ. ಜಿನದತ್ತನ ಶಿಷ್ಯನಾದ ಅಮರ ಚಂದ್ರನು ರಚಿಸಿದ ಛಂದೋ – ರತ್ನಾವಲೀ, ರತ್ನಮಂಜೂಷಾ – ಇದರ ಇನ್ನೊಂದು ಹೆಸರು ಚಂದೋ – ವಿಚಿತ – ಇದರ ಒಟ್ಟು ಹನ್ನೆರಡು ಅಧ್ಯಾಯಗಳಲ್ಲಿ ಎಂಟು ಅಧ್ಯಾಯಗಳ ಮೇಲೆ ಟೀಕೆಯೂ ಕೂಡ ಲಭಿಸಿದೆ. ಈ ಕೃತಿಗಳಲ್ಲಿ ಸಹ ಅವವುಗಳದೇ ಆದ ವಿಶೇಷತೆಗಳಿವೆ. ಆದರೂ ಶಾಸ್ತ್ರೀಯ ದೃಷ್ಟಿಯಿಂದ

ಇವುಗಳ ಸಂಪೂರ್ಣ ವಿಷಯಗಳ ಪ್ರರೂಪಣೆಯು ಪೂರ್ವದ ಗ್ರಂಥಗಳಲ್ಲಿ ಸಮಾವೇಶವಾದುದು ಕಂಡು ಬರುತ್ತದೆ.

ಕೋಶ – ಪ್ರಾಕೃತ :–

ಪ್ರಾಕೃತ ಕೊಷದಲ್ಲಿ ಎಲ್ಲಕ್ಕೂ ಪ್ರಾಚೀನವಾದ ಕೃತಿಯು ಧನಪಾಲ ಕೃತ ಪಾಇಯಲಚ್ಛೀ – ನಾಮಮಾಲಾ ಎಂಬುದಾಗಿದೆ. ಇದರ ಪ್ರಶಸ್ತಿಗೆ ಅನುಸರಿಸಿ, ಕರ್ತೃವು ತನ್ನ ಕೊನೆಯ ಕಿರಿಯ ತಂಗಿಯಾದ ಸುಂದರಿಗಾಗಿ ಇದನ್ನು ಧಾರಾನಗರದಲ್ಲಿ ವಿಸಂ. ೧೦೨೯ ರಲ್ಲಿ ರಚಿಸಿದನು. ಆಗ ಮಾಳವನ ಅರಸನು ಖೇಟವನ್ನು ಸುಲಿಗೆ ಗೈದನು. ಈ ಘಟನೆಯು ಉಳಿದ ಐತಿಹಾಸಿಕ ಘಟನೆಗಳಿಂದಲೂ ಪ್ರಾಮಾಣಿಕವೆನಿಸಿ ಸಿದ್ಧವಾಗಿದೆ. ಧಾರಾನರೇಶ ಹರ್ಷ ದೇವನು ಒಂದು ಶಿಲಾಲೇಖದಲ್ಲಿ, ಅವನು ರಾಷ್ಟ್ರಕೂಟ ರಾಜನಾದ ಕೊಟ್ಟಗದೇವನ ಲಕ್ಷ್ಮೀಯನ್ನು ಅಪಹರಣ ಮಾಡಿದ ಉಲ್ಲೇಖವು ಬರುತ್ತದೆ. ಈ ಕೋಷದಲ್ಲಿ ಅಮರಕೋಷದ ರೀತಿಯಲ್ಲಿ ಪ್ರಾಕೃತ ಪದ್ಯಗಳಲ್ಲಿ ಸುಮಾರು ಒಂದು ಸಾವಿರ ಪ್ರಾಕೃತ ಶಬ್ದಗಳ ಪರ್ಯಾಯ ವಾಚೀ ಶಬ್ದಗಳನ್ನು ೨೫೦ ಗಾಹಗಳಲ್ಲಿ ಹೇಳಿದೆ. ಪ್ರಾರಂಭದಲ್ಲಿ ಕಮಲಾಸನಾದಿ ೧೮ ಹೆಸರುಗಳ ಪರ್ಯಾಯ ಪದಗಳನ್ನು ಒಂದೊಂದು ಗಾಥಾದಲ್ಲಿಯೂ, ಮುಂದೆ ಲೋಕಾಗ್ರ ಮೊದಲಾದ ೧೯೭ ಪದಗಳನ್ನು ಅರ್ಧ ಅರ್ಧ ಗಾಥೆಗಳಲ್ಲಿಯೂ, ತರುವಾಯ ೫೯೭ ರ ವರೆಗೆ ಒಂದೊಂದು ಚರಣಗಳಲ್ಲಿಯೂ ಉಳಿದ ಪದಗಳನ್ನು ಭಿನ್ನ ರೂಪದಿಂದ ಅರ್ಥಾತ್ ಒಂದು ಗಾಥಾದಲ್ಲಿ ನಾಲ್ಕು, ಐದು, ಕೆಲವೆಡೆಗಳಲ್ಲಿ ಆರು ನಾಮಗಳನ್ನು ಸಹ ಹೇಳಿದೆ. ಗ್ರಂಥದಲ್ಲಿ ಇವೇ ನಾಲ್ಕು ಪರಿಚ್ಛೇದಗಳಾಗಿವೆ. ಹೆಚ್ಚಾಗಿ ನಾಮಗಳೂ ಅವುಗಳ ಪರ್ಯಾಯಗಳೂ ತಬ್ಧವಗಳಾಗಿವೆ. ನಿಜವಾದ ದೇಶೀ ಶಬ್ದಗಳು ಹೆಚ್ಚಿಗೆ ಹೆಚ್ಚೆಂದರೆ ಐದನೆಯ ಭಾಗದಷ್ಟಿವೆ.

ಇನ್ನೊಂದು ಪ್ರಾಕೃತ ಕೋಷವು ಹೇಮಚಂದ್ರ ಕೃತ ದೇಶಿ – ನಾಮ ಮಾಲಾ ಎಂಬುದಾಗಿದೆ. ನಿಜವಾಗಿಯೂ ಈ ಗ್ರಂಥದ ಹೆಸರನ್ನು ಸ್ವತಃ ಲೇಖಕನು ಕೃತಿಯ ಪ್ರಾರಂಭದಲ್ಲಿಯೂ ಕೊನೆಯಲ್ಲಿಯೂ ಸ್ಪಷ್ಟವಾಗಿಯೂ ದೇಶೀ – ಶಬ್ದ – ಸಂಗ್ರಹ ಎಂದು ಸೂಚಿಸಿದ್ದಾನೆ. ಹಾಗೂ ಕೊನೆಯ ಗಾಥಾದಲ್ಲಿ ಇದನ್ನು ರತ್ನಾವಲೀ ಎಂಬ ಹೆಸರಿನಿಂದಲೂ ಕರೆದಿದ್ದಾನೆ. ಆದರೆ ಈ ಗ್ರಂಥವನ್ನು ಮೊದಲ ಸಲ ಸಂಪಾದಿಸಿದ ಡಾ. ಪಿಶ್ಶೆಲನು ಕೆಲವೊಂದು ಹಸ್ತ ಪ್ರತಿಗಳ ಆಧಾರದಿಂದ ಈ ಹೆಸರೇ ಹೆಚ್ಚು ಸಾರ್ಥಕವೆಂದು ತಿಳೀದು ಸ್ವೀಕರಿಸಿದ್ದಾನೆ. ಮುಂದಿನ ಸಂಸ್ಕರಣಗಳಲ್ಲಿಲ್ಲ ಇದೇ ಹೆಸರು ಇದಕ್ಕೆ

ರೂಢವಾಗಿಬಿಟ್ಟಿದೆ. ಈ ಕೋಷದಲ್ಲಿ ತನ್ನ ರೀತಿಯಲ್ಲಿ ಒಂದು ಪರಿಪೂರ್ಣ ಕ್ರಮ ವ್ಯವಸ್ಥೆಯನ್ನು ಪಾಲಿಸಿಕೊಂಡು ಹೋಗಲಾಗಿದೆ. ಒಟ್ಟು ಗಾಥೆಗಳ ಸಂಖ್ಯೆಯು ೭೮೩ ಇದೆ. ಇವುಗಳಲ್ಲಿ ಎಂಟು ವರ್ಗಗಳಲ್ಲಿ ವಿಭಜಿಸಲಾಗಿದೆ. ಇವುಗಳಲ್ಲಿ ಕ್ರಮದಿಂದ ಸ್ವರಾದಿ, ಕವರ್ಗಾದಿ, ಚವರ್ಗಾದಿ, ಟವರ್ಗಾದಿ, ತವರ್ಗಾದಿ, ಪವರ್ಗಾದಿ, ಯಕಾರಾದಿ ಮತ್ತು ಸಕಾರಿ ಶಬ್ದಗಳೆಂದು ಗ್ರಹಿಸಲಾಗಿದೆ. ಏಳನೆಯ ವರ್ಗದ ಪ್ರಾರಂಭದಲ್ಲಿ ಕೋಷಕಾರನು, ಈ ಪ್ರಕಾರದ ನಾಮ ವ್ಯವಸ್ಥೆಯು ವ್ಯಾಕರಣದಲ್ಲಿ ಪ್ರಸಿದ್ಧವಾಗಿಲ್ಲ. ಆದರೂ ಜೋತಿಷ್ಯ ಶಾಸ್ತ್ರದಲ್ಲಿ ಪ್ರಸಿದ್ಧವಿದೆ, ಅದನ್ನೇ ಇಲ್ಲಿ ಆಧಾರವೆಂದು ಅನುಸರಿಸಲಾಗಿದೆ ಎಂದು ಹೇಳಿದ್ದಾನೆ. ಈ ವರ್ಗಗಳಲ್ಲಿಯೂ ಶಬ್ದಗಳನ್ನು ಅವುಗಳ ಅಕ್ಷರ ಸಂಖ್ಯೆಯಲ್ಲಿ ಅರ್ಥಾತ್ ಎರಡು, ಮೂರು, ನಾಲ್ಕು ಮತ್ತು ಐದು ಅಕ್ಷರಗಳುಳ್ಳ ಶಬ್ದಗಳನ್ನು ವಿಂಗಡಿಸಿ ಇಡಲಾಗಿದೆ. ಈ ಸಂಖ್ಯಾತ್ಮಕ ಶಬ್ದಗಳಲ್ಲಿಯೂ ಅಕಾರಾದಿ ವರ್ಣಾನುಕ್ರಮವನ್ನು ಪಾಲಿಸಲಾಗಿದೆ. ಈ ಪ್ರಕಾರ ಏಕಾರ್ಥವುಳ್ಳ ಶಬ್ದಗಳೆಲ್ಲ ಮುಗಿದ ಮೇಲೆ ತಿರುಗಿ ಅದೇ ಅಕಾರಾದಿ ಖಂಡದಲ್ಲಿ ಅದೇ ಕ್ರಮದಿಂದ ಅನೇಕಾರ್ಥಗಳನ್ನು ಹೇಳುವ ಆಖ್ಯಾನ ಮಾಡಲಾಗಿದೆ. ಈ ಕ್ರಮ ಪದ್ಧತಿಯನ್ನು ಪೂರ್ಣವಾಗಿ ತಿಳಿದುಕೊಳ್ಳುವುದಕ್ಕೆ ಮೊದಲನೆಯ ವರ್ಗದ ಉದಾಹರಣೆಗಳನ್ನು ತಕ್ಕೊಳ್ಳೋಣ. ಇದರಲ್ಲಿ ಮೊದಲಿನ ಆರು ಗಾಥೆಗಳವರೆಗೆ ಎರಡು, ೧೯ರವರೆಗೆ ಮೂರು, ೩೭ರ ವರೆಗೆ ನಾಲ್ಕು, ೪೯ನೆಯ ಗಾಥೆಯವರೆಗೆ ಐದು ಅಕ್ಷರಗಳುಳ್ಳ ಆಕಾರಾದಿ ಶಬ್ದಗಳನ್ನು ಹೇಳಲಾಗಿದೆ. ಆ ಮೇಲೆ ಅರವತ್ತರ ವರೆಗೆ ಅಕಾರಾದಿ ಶಬ್ದಗಳ ಎರಡು ಅಕ್ಷರಾದಿ ಕ್ರಮದಿಂದ ಅವುಗಳ ಅನೇಕಾರ್ಥಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಮುಂದೆ ೭೨ ರವರೆಗೆ ಏಕಾಥವುಳ್ಳ, ೭೬ ರ ವರೆಗೆ ಅನೇಕಾರ್ಥವುಳ್ಳ ಅಕಾರಾದಿ ಶಬ್ದಗಳಿವೆ. ತಿರುಗಿ ಇದೇ ಪ್ರಕಾರ ೮೩ ರವರೆಗೆ ಇಕಾರಾದಿ, ೮೪ ರಲ್ಲಿ ಈಕಾರಾದಿ, ೧೩೯ ರವರೆಗೆ ಉಕಾರಾದಿ, ೧೪೮ ರವರೆಗೆ ಎಕಾರಾದಿ ಮತ್ತು ಕೊನೆಯ ೧೭೪ ಗಾಥಾಗಳ ವರೆಗೆ ಓಕಾರಾದಿ ಶಬ್ದಗಳನ್ನು ಕ್ರಮದಿಂದ ಏಕಾರ್ಥ ಮತ್ತು ಅನೇಕಾರ್ಥಗಳುಳ್ಳ ಶಬ್ದಗಳ ಚಯನ ಮಾಡಲಾಗಿದೆ. ಇದೇ ಕ್ರಮವು ಉಳಿದ ಎಲ್ಲ ವರ್ಗಗಳಲ್ಲಿಯೂ ಕಂಡುಬರುತ್ತದೆ. ಸ್ಫುಟಪತ್ರಕ ಪ್ರಣಾಲಿಯ (ಕಾರ್ಡಿಂಗ ಸಿಸ್ಟಿಮ್) ಹೊರತಾಗಿ ಈ ಕ್ರಮ ಪರಿಪಾಲನೆಯು ಅಸಂಭವವೆಂದು ಕಂಡುಬರುತ್ತದೆ. ಆದರೂ ಈ ಪದ್ಧತಿಯು ಜೋತಿಶಾಸ್ತ್ರಗಳಲ್ಲಿ ಮತ್ತು ಹೇಮಚಂದ್ರ ಹಾಗೂ ಅವನ ಪ್ರಣಾಲಿಯನ್ನು ಪಾಲಿಸುವ ವ್ಯಾಕರಣಗಳಲ್ಲಿ ಅವಶ್ಯ ಪ್ರಚಲಿತವಾಗಿತ್ತು.

ದೇಶೀನಾಮಮಾಲಾದಲ್ಲಿ ಶಬ್ದಗಳ ಚಯನವನ್ನೂ ಕೂಡ ಒಂದು ವಿಶೇಷ ಸಿದ್ಧಾಂತಕ್ಕನುಸರಿಸಿ ಮಾಡಲಾಗಿದೆ. ಕರ್ತೃವು ಆದಿಯಲ್ಲಿ ಹೀಗೆ ಹೇಳಿದ್ದಾನೆ–

ಜೇ ಲಕ್ಖಣೇಣ ಸಿದ್ಧಾಣ ಪಸಿದ್ಧಾ ಸಕ್ಕಯಾಹಿಹ ಾಣೆಸು ।

ಣ ಯ ಗ ಉಡ ಲಕ್ಖಣಾಸತ್ತಿ ಸಂಭವಾ ತೇ ಇಹ ್ ಣಿಬದ್ಧಾ॥೩॥

ಅರ್ಥಾತ್ ಯಾವ ಶ್ಬ್ದಗಳ ಸಂಸ್ಕೃತ, ಪ್ರಾಕೃತ, ವ್ಯಾಕರಣ ನಿಯಮಗಳಿಂದ ಸಿದ್ಧವಾಗುವುದಿಲ್ಲವೋ, ಸಂಸ್ಕೃತ ಕೋಷಗಳಲ್ಲಿ ಸಿಗುವುದಿಲ್ಲವೋ, ಅಲಂಕಾರ ಶ್ಾಸ್ತ್ರ ಪ್ರಸಿದ್ಧ ಗೌಡೀ ಲಕ್ಷಣ ಶ್ಕ್ತಿಯಿಂದ ಅಭೀಷ್ಟ ಅರ್ಥವನ್ನು ಕೊಡುವುದಿಲ್ಲವೋ, ಅಂಥವುಗಳನ್ನೇ ದೇಶೀ ಎಂದು ತಿಳಿದು ಈ ಕೋಷದಲ್ಲಿ ನಿಬದ್ಧಗೊಳಿಸಲ ಾದೆ. ಇಷ್ಟಾಗಿಯೂ ದೇಶ್–ವಿದೇಶ್ಗಳ ನಾನಾ ಭಾಷೆಗಳಲ್ಲಿ ಪ್ರಚಲಿತ ಮತ್ತು ಉಕ್ತಶ್ರೇಣಿಯಲ್ಲಿ ಬರದೆ ಸಮಸ್ತ ಶ್ಬ್ದಗಳ ಸಂಗ್ರಹ ವು ಇದರಲ್ಲಿ ಇದೆಯೆ ? ಎಂಬ ಪ್ರಶ್ನೆಯೂ ಒಂದು ಉದ್ಭವಿಸುತ್ತದೆ. ಇದರ ಉತ್ತರವು ಮುಂದಿನ ಗಾಥಾದಲ್ಲಿ ಗ್ರಂಥಕಾರನಿಂದ ಲಭಿಸುತ್ತದೆ–

ದೇಸ ವಿಸೇಸಪಸಿದ್ಧೀಇ ಭಣ್ಣಾ ಮಾಣಾ ಅಣಂತಯಾ ಹುಂತಿ ।

ತಮ್ಹಾ ಅಣಾಇ–ಪಾಇಯ ಪಯಟ್ಟ–ಭಾಸಾ ವಿಸೇಸಓದೇಸೇಸೀ ॥೪॥

ಅರ್ಥತ್ ಭಿನ್ನ ಭಿನ್ನ ದೇಶ್ಗಳಲ್ಲಿ ಪ್ರಸಿದ್ಧ ವಿರುವ ಶ್ಬ್ದಗಳ ಆಖ್ಯಾನಕ್ಕೆ ತೊಡಗಿದರೆ ಈ ಶ್ಬ್ದಗಳು ಅನಂತರ ಕಂಡುಬರುತ್ತದೆ. ಅದರಿಂದ ಇಲ್ಲಿ ಅನಾದಿಕಾಲದಿಂದ ಪ್ರಚಲಿತವಿರುವ ಹ ಾಗೂ ವಿಶೇಷ ರೂಪದಿಂದ ಪ್ರಾಕೃತವೆಂದು ಹ ೇಳು ಾಗುವ ಭಾಷೆಯಲ್ಲಿ ಕಂಡುಬರುವ ಶ್ಬ್ದಗಳನ್ನು ಮಾತ್ರ ದೇಶೀ ಎಂದು ಗ್ರಹಿಸಿದೆ. ಇದರಿಂದ ಕೋಷಕಾರನು ದೇಶೀ ಎನ್ನು ವಲ್ಲಿ ಇರುವ ಅಭಿಪ್ರಾಯವು ಸ್ಪಷ್ಟವಾಗಿರುತ್ತದೆ. ಪ್ರಾಕೃತ ಸಾಹಿತ್ಯದ ಭಾಷೆ ಮತ್ತು ಅದರ ನುಡಿಗಟ್ಟುಗಳಲ್ಲಿ ಪ್ರಚಲಿತ ವಾಗಿರುವ ಶ್ಬ್ದಗಳು ಮಾತ್ರ ಇಲ್ಲಿ ದೇಶಿ ಎನ್ನಿ ಸುತ್ತವೆ. ವ್ಯಾಕರಣದಿಂದ ಇಲ್ಲವೆ ಅಲಂಕಾರದ ರೀತಿಯಿಂದ ಸಿದ್ಧವಾಗುವ ಪದಗಳೆಂದು ಅಲ್ಲ, ಸಂಸ್ಕೃತ ಕೋಷಗಳಲ್ಲಿ ಬರುವ ಶ್ಬ್ದಗಳೆಂದು ಅಲ್ಲ. ಈ ಮಹ ಾತ್ ಕಾರ್ಯದಲ್ಲಿ ತೊಡಗುವ ಪ್ರೇರಣೆಯು ಅವನಿಗೆ ಎಲ್ಲಿಂದ ಲಭಿಸಿತು ? ಎಂಬುದನ್ನು ಸಹ್ ಕರ್ತೃವು ಎರಡನೆಯ ಗಾಥಾದಲ್ಲಿ ಅದರ ಸ್ವೋಪಜ್ಞ ಟೀಕೆಯಲ್ಲಿ ಸ್ಪಷ್ಟಗೊಳಿಸಿದ್ದಾನೆ. ಯಾವಾಗ ಅದನ್ನು ಉಪಲಬ್ಧನಿಶ್ೇಷ ದೇಶೀ ಶ್ಾಸ್ತ್ರ ಗಳ ಪರಿಶೀಲನೆಯನ್ನು ಮಾಡಿದನೋ ಆಗ ಅವನಿಗೆ ಈ ಸ್ಸಂಗತಿಗಳು ಕಂಡುಬಂದುವು–ಕೆಲವೊಂದು ಶ್ಬ್ದಗಳಿಗೆ ಸಾಹಿತ್ಯದ, ಅವುಗಳ ಪ್ರಚಾರದಲ್ಲಿ ಕೆಲವು ವಿಶೇಷ ಅರ್ಥವಾಗುತ್ತಿದೆ ; ಇನ್ನು ಕೆಲವು ಶ್ಬ್ದಗಳಲ್ಲಿ ವರ್ಣಗಳ

ಅನುಕ್ರಮವು ನಿಶ್ಚಿತವಾಗಿಲ್ಲ ; ಕೆಲವೊಂದು ಶಬ್ದಗಳಲ್ಲಿ ಪ್ರಾಚೀನ ಹಾಗೂ ವರ್ತಮಾನ ಅರ್ಥಗಳಲ್ಲಿ ವಿಸಂಗತಿಯಿದೆ, ವಿರೋಧವಿದೆ ; ಅದರಂತೆಯೇ ಕೆಲವೆಡೆಯಲ್ಲಿ ಗತಾನುಗತಿಗೆ ಅನುಸರಿಸಿ ಒಂದಕ್ಕೆ ಮತ್ತೊಂದರ್ಥವಾಗುತ್ತದೆ. ಇದರಿಂದ ಆಚಾರ್ಯನಿಗೆ ಅನುಕುಲತೆಯು ಉತ್ಪನ್ನವಾಯಿತು. ಈ ಪ್ರಕಾರ ಅಪಭ್ರಷ್ಟ ಶಬ್ದಗಳ ಕಲಬೆರಕೆಯಲ್ಲಿ ಸಿಕ್ಕುಬಿದ್ದ ಜನತೆಯ ಉದ್ಧಾರವಾಗುವ ಬಗೆಯು ಹೇಗೆ ? ಸಾಕು. ಇದೇ ಕುತೂಹಲದಿಂದ ಅವರು ಈ ದೇಶೀ-ಶಬ್ದ ಸಂಗ್ರಹ ಕಾರ್ಯದಲ್ಲಿ ಪ್ರವೃತ್ತನಾದನು. ದೇಶೀ ಶಬ್ದಗಳ ಸಂಬಂಧದಲ್ಲಿ ಕೆಲವೊಂದು ಮರ್ಯಾದೆಗಳನ್ನು ಕೋಷಕಾರನು ಬಹು ಸಾವಧಾನದಿಂದ ಪಾಲಿಸಿದ್ದಾನೆ. ಇದರ ಕೆಲವೊಂದು ಸ್ವರೂಪವನ್ನು ಅವನು ಸ್ವತಃ ರಚಿಸಿದ ಟೀಕೆಯನ್ನು ಅವಲೋಕಿಸುವುದರಿಂದ ನಾವು ಕಂಡುಕೊಳ್ಳಬಹುದಾಗಿದೆ. ಉದಾಹರಣಾರ್ಥ :- ಗ್ರಂಥದ ಪ್ರಾರಂಭದಲ್ಲಿಯೇ ' ಅಜ್ಜ ' ಶಬ್ದವನ್ನು ಸ್ವೀಕರಿಸಿದ್ದಾನೆ. ಅದರ ಪ್ರಯೋಗವನ್ನು ' ಜಿನ ' ಎಂಬರ್ಥದಲ್ಲಿ ಮಾಡಿದ್ದಾನೆ. ಟೀಕೆಯಲ್ಲಿ ಒಂದು ಪ್ರಶ್ನೆಯನ್ನು ಎತ್ತಿದ್ದಾನೆ. 'ಅಜ್ಜ' ಎಂಬುದು ಸ್ವಾಮಿಯ ಪರ್ಯಾಯಾರ್ಥವುಳ್ಳ ಆರ್ಯ ಶಬ್ದದಿಂದ ಸಿದ್ಧವಾಗುತ್ತದೆಯೇ ? ಇದಕ್ಕೆ ಉತ್ತರವೆಂದು ಅವನು ಹೀಗೆ ಹೇಳಿದ್ದಾನೆ. ಈ ಗ್ರಂಥದ ಆದಿಯಲ್ಲಿ ಅವನು ಅದನ್ನು ಮಂಗಳಾರ್ಥವುಳ್ಳ ಶಬ್ದವೆಂದು ಸ್ವೀಕರಿಸಿದ್ದಾನೆ. ೧೮ನೆಯ ಗಾಥಾದಲ್ಲಿ ' ಅವಿಣಯವರ' ಶಬ್ದವನ್ನು ಜಾರ ಎಂಬ ಅರ್ಥದಲ್ಲಿ ಗ್ರಹಣ ಮಾಡಲಾಗಿದೆ. ಟೀಕೆಯಲ್ಲಿ ಈ ಶಬ್ದದ ಉತ್ಪತ್ತಿಯನ್ನು ' ಅವಿನಯ-ವರ ' ದಿಂದ ಆಗುತ್ತಿದ್ದರೂ ಸಂಸ್ಕೃತದಲ್ಲಿ ಅದರ ಈ ಅರ್ಥವು ಪ್ರಸಿದ್ಧವಿಲ್ಲ. ಅದಕ್ಕಾಗಿಯೇ ಈ ಪದಕ್ಕೆ ಇಲ್ಲಿ ದೇಶೀ ಎಂದು ಮನ್ನಿಸಲಾಗಿದೆ. ೬೭ನೆಯ ಗಾಥಾದಲ್ಲಿ ' ಆರಣಾಲ ' ಎಂಬುದರ ಅರ್ಥವನ್ನು ಕಮಲವೆಂದು ಹೇಳಲಾಗಿದೆ. ಟೀಕೆಯಲ್ಲಿ ಇದರ ವಾಚಿಕ ಅರ್ಥವನ್ನು ಇಲ್ಲಿ ಗ್ರಹಿಸಿಲ್ಲ ; ಯಾಕೆಂದರೆ ಅದು ಸಂಸ್ಕೃತೋದ್ಭವವಾಗಿದೆಯೆಂದು ವಿವರಿಸಿ ' ಆಸಿಯಅ ' ಎಂಬುದು ಕಬ್ಬಿಣ ಕೊಡ ಎಂಬರ್ಥದಲ್ಲಿ ಹೇಳಿ, ಟೀಕೆಯಲ್ಲಿ ಕೆಲವು ಜನರ ಇದಕ್ಕೆ ಅಯಸ್ ದಿಂದ ಜನಿಸಿದ ಆಯಸಿಕದ ಅಪಭ್ರಂಶ ರೂಪವಾಗಿದೆಯೆಂದೂ ಅನ್ನಿಸಲಾಗುತ್ತದೆಂದು ವಿವರಿದೆ. ಈ ಟಿಪ್ಪಣಿಯ ಮೇಲಿಂದ ಕೋಶಕಾರನು ತನ್ನ ಪೂರ್ವೋಕ್ತಸಿದ್ಧಾಂತ ಪಾಲನೆಯಲ್ಲಿ ನಿರಂತರ ಚಿಂತೆಯ ಆಭಾಸವು ಕಂಡುಬರುತ್ತದೆ. ಅವನ ಸಂಸ್ಕೃತ ಟೀಕೆಯಲ್ಲಿ ಈ ಪ್ರಕಾರದ ಶಬ್ದಗಳ ಸ್ಪಷ್ಟೀಕರಣ ಮತ್ತು ವಿವೇಚನೆಗಳ ಹೊರತಾಗಿ ಗಾಥಾಗಳ ಮುಖಾಂತರ ಉಕ್ತ ದೇಶೀ ಶಬ್ದಗಳ ಪ್ರಯೋಗದ ಉದಾಹರಣೆಯನ್ನೂ ಸಹ ಕೊಟ್ಟಿದ್ದಾನೆ. ಇಂಥ ಒಟ್ಟು ಗಾಥಾಗಳ ಸಂಖ್ಯೆಯು ೬೩೪ ಇದ್ದುದು ಕಂಡುಬರುತ್ತದೆ. ಇವುಗಳಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ಗಾಥಾಗಳು ಶೃಂಗಾರಾತ್ಮಕವಾಗಿವೆ. ಸುಮಾರು ೬೫ ಗಾಥಾಗಳು ಕುಮಾರಪಾಲನ ಪ್ರಶಂಸಾ ವಿಷಯಕವಾಗಿದೆ ಉಳಿದವು ಬೇರೆಯಾಗಿವೆ.

ಇವೆಲ್ಲವು ಸ್ವತಃ ಹೇಮಚಂದ್ರನೇ ರಚಿಸಿದವುಗಳೆಂದು ಕಂಡುಬರುತ್ತದೆ. ಶಬ್ದ ವಿವೇಚನೆಯ ಸಂಬಂಧದಲ್ಲಿ ಅಭಿಮಾನ ಚಿಹ್ನ, ಅವಂತಿಸುಂದರೀ, ಗೋಪಾಲ, ದೇವರಾಜ, ದ್ರೋಣ, ಧನಪಾಲ, ಪಾರೋದುಖಲ, ಪಾದಲಿಪ್ತಾಚಾರ್ಯ, ರಾಹುಲಕ, ಶಾಂಬ, ಶ್ರೀಕಾಂತ ಮತ್ತು ಸಾತವಾಹನ ಈ ಹನ್ನೆರಡು ಶಾಸ್ತ್ರಕಾರರು ಹಾಗೂ ಸಾರತರದೇಶೀ ಮತ್ತು ಅಭಿಮಾನ ಚಿಹ್ನ ಈ ಎರಡು ದೇಶೀ ಶಬ್ದಗಳ ಸೂತ್ರಪಾಠಗಳ ಉಲ್ಲೇಖವು ದೊರೆಯುತ್ತದೆ. ದೇಶೀ ಶಬ್ದಗಳ ಅನೇಕ ಕೋಷಗಳು ಈ ಲೇಖಕನ ಸಮ್ಮುಖದಲ್ಲಿ ಉಪಸ್ಥಿತವಿದ್ದವೆಂಬುವುದು ಗೊತ್ತಾಗುತ್ತದೆ. ಪ್ರಾರಂಭದ ಎರಡನೆಯ ಗಾಥಾದ ಟೀಕೆಯಲ್ಲಿ ಲೇಖಕನು ಪಾದಲಿಪ್ತಾಚಾರ್ಯ ಮೊದಲಾದವರಿಂದ ವಿರಚಿಸಲ್ಪಟ್ಟ ದೇಶೀ ಶಾಸ್ತ್ರಗಳು ಇದ್ದರೂ ಸಹ ಇದನ್ನು ರಚಿಸುವುದರ ಪ್ರಯೋಜನವನ್ನು ವಿವರಿಸಿದ್ದಾನೆ. ಮೇಲೆ ಹೇಳಿದ ಹೆಸರುಗಳಲ್ಲಿ ಧನಪಾಲ ಕೃತ 'ಪಾಇಯ-ಲಚ್ಛಿ ನಾಮಮಾಲಾ' ಎಂಬ ಕೋಷವಂತೂ ದೊರೆಯುತ್ತದೆ. ಉಳಿದವುಗಳು ಯಾವವೆಂಬುದು ಗೊತ್ತಿಲ್ಲ. ಟೀಕೆಯಲ್ಲಿ ಕೆಲವೊಂದು ಅವತರಣಗಳು ಧನಪಾಲ ಕೃತವೆಂದು ಹೇಳಲಾದೆಯಾಗಿದರೂ ಅವು ಅವನ ಉಪಲಬ್ಧ ಕೃತಿಯಲ್ಲಿ ನೋಡಲು ಸಿಕ್ಕುವುದಿಲ್ಲ. ಮೃಚ್ಛಕಟಿಕದ ಟೀಕಾಕಾರನಾದ ಲಲ್ಲಾದೀಕ್ಷಿತನು 'ದೇಶೀ ಪ್ರಕಾಶ' ಎಂದು ಹೆಸರಿನ ದೇಶೀ ಕೋಷದ ಅವತರಣಗಳನ್ನು ಕೊಟ್ಟಿದ್ದಾನೆ. ಹಾಗೆಯೇ ಕ್ರಮದೀಶ್ವರನು ತನ್ನ ಸಂಕ್ಷಿಪ್ತಸಾರದಲ್ಲಿ ದೇಶೀಸಾರ ಎಂಬ ಹೆಸರಿನ ಕೋಷದ ಉಲ್ಲೇಖವನ್ನು ಮಾಡಿದ್ದಾನೆ. ಆದರೆ ದುರ್ಭಾಗ್ಯದಿಂದ ಈ ಮಹತ್ವ-ಪೂರ್ಣ ಗ್ರಂಥಗಳು ಇನ್ನೂ ನಮಗೆ ಲಭಿಸಿಲ್ಲ. ದೇಶೀ ನಾಮಮಾಲಾದ ಪ್ರಥಮ ಸಂಪಾದಕನಾದ ಡಾ. ಪಿಶೆಲನು ಈ ಕೋಷದ ಉದಾಹರಣಾತ್ಮಕ ಗಾಥಾಗಳ ಭ್ರಷ್ಟ ಪಾಠಗಳನ್ನು ಬಹಳ ಕಷ್ಟದಿಂದ ಸಂಪಾದಿಸಿದ್ದಾನೆ. ಪ್ರೊ. ಮುರಳೀಧರ ಬ್ಯಾನರ್ಜಿಯು ತನ್ನ ಸಂಸ್ಕರಣದಲ್ಲಿ ಪಾಠಗಳ ಕೆಲವೊಂದು ಸಂಶೋಧಿತ ರೂಪಗಳನ್ನು ಉಪಸ್ಥಿತಗೊಳಿಸಿದ್ದಾನೆ. ಆದರೆ ಅನೇಕ ಗಾಥಾಗಳ ಸಂಶೋಧನೆಯು ಇನ್ನೂ ನಡೆಯುವ ಅವಶ್ಯಕತೆಯು ಇದೆ. ಕೋಷದಲ್ಲಿ ಸಂಗ್ರಹಿಸಿದ ನಾಮಗಳ ಸಂಖ್ಯೆಯು ಪ್ರೊ. ಬ್ಯಾನರ್ಜಿಯ ಮತಕ್ಕನುಸರಿಸಿ ೩೯೭೮ ಇದೆ. ಇವುಗಳಲ್ಲಿ ಅವನು ೧೫೦೦ ಶಬ್ದಗಳನ್ನು ಯಥಾರ್ಥ ದೇಶೀ ಎಂದು ಮನ್ನಿಸುವನು. ಉಳಿದವುಗಳಲ್ಲಿ ೧೦೦ ತತ್ಸಮ, ೧೮೫೦ ತದ್ಭವ ಮತ್ತು ೫೨೮ ಸಂಶಯಾತ್ಮಕ ತದ್ಭವ ಶಬ್ದಗಳೆಂದು ಹೇಳಲಾದೆ. ಆ ದೇಶೀ ಶಬ್ದಗಳಲ್ಲಿ ಅವನ ಮತಕ್ಕನುಸರಿಸಿ ೮೦೦ ಶಬ್ದಗಳಂತೂ ಭಾರತೀಯ ಆರ್ಯ ಭಾಷೆಗಳಲ್ಲಿ ಒಂದಲ್ಲ ಒಂದು ರೂಪದಲ್ಲಿ ಕಂಡು ಬರುತ್ತವೆ. ಆದರೆ ಉಳಿದ ೭೦೦ ಶಬ್ದಗಳ ಮೂಲದ ವಿಷಯವು ಗೊತ್ತಾಗುವುದಿಲ್ಲ.

ಕೋಷ-ಸಂಸ್ಕೃತ :-

ಸಂಸ್ಕೃತದ ಪ್ರಾಚೀನತಮ ಜೈನ ಕೋಷಕಾರನು ಧನಂಜಯನೆಂದು ಕಂಡು ಬರುತ್ತದೆ. ಇವನ ನಾಮಮಾಲಾ ಮತ್ತು ಅನೇಕಾರ್ಥ ನಾಮಮಾಲಾ ಎಂಬ ಎರಡು ಕೃತಿಗಳು ಉಪಬ್ಧವಿವೆ. ಅವನು ರಚಿಸಿದ ನಾಮಮಾಲಾ ಎಂಬುದರ ಕೊನೆಯಲ್ಲಿ ಕವಿಯು ಅಕಲಂಕನ ಪ್ರಮಾಣ, ಪೂಜ್ಯಪಾದನ ಲಕ್ಷಣ (ವ್ಯಾಕರಣ) ಮತ್ತು ದ್ವಿಸಂಧಾನ ಕರ್ತೃಷಿ ಅರ್ಥಾತ್ ಸ್ವತಃ ರಚಿಸಿದ ಕಾವ್ಯ ಈ ಮೂರು ರತ್ನತ್ರಯಗಳು ಅಪೂರ್ವವೆಂದು ಹೇಳಿದ್ದಾನೆ. ಈ ಉಲ್ಲೇಖದಿಂದ ಕವಿಯು ಕೋಷವನ್ನು ರಚಿಸಿದ ಕಾಲದ ಪೂರ್ವಾವಧಿಯು ಎಂಟನೆಯ ಶತಮಾನವೆಂದು ನಿಶ್ಚಿತವಾಗುತ್ತದೆ. ಅನೇಕಾರ್ಥ ನಾಮಮಾಲಾದ ' ಹೇತಾವೇವಃ ಪ್ರಕಾರಾದಿ ' ಎಂಬ ಶ್ಲೋಕವು ವೀರಸೇನ ಕೃತ ಧವಲಾ ಟೀಕೆಯಲ್ಲಿ ಉದ್ಧೃತವಾಗಿದೆ. ಇದರ ರಚನಾ ಕಾಲವು ಶಕ ಸಂ. ೭೩೮ ಇದೆ. ಈ ಪ್ರಕಾರ ಈ ಕೋಷದ ರಚನಾ ಕಾಲವು ಕ್ರಿಶ.೭೮೦ ರಿಂದ ೮೧೬ ರ ಮಧ್ಯದಲ್ಲಿ ಎಂದು ಸಿದ್ಧವಾಗುತ್ತದೆ. ನಾಮಮಾಲಾದಲ್ಲಿ ೨೦೬ ಶ್ಲೋಕಗಳು ಇವೆ. ಮತ್ತು ಅವುಗಳಲ್ಲಿ ಸಂಗ್ರಹಿಸಿದ ಒಂದರ್ಥವುಳ್ಳ ಶಬ್ದಗಳ ಸಂಖ್ಯೆಯು ಸುಮಾರು ೨೦೦೦ ಇದೆ. ಕೋಷಕಾರನು ತನ್ನ ಸರಳ ಮತ್ತು ಸುಂದರ ಶೈಲಿಯಿಂದ ಅನೇಕ ಶಬ್ದ ಸಮೂಹವನ್ನು ಸ್ವಲ್ಪ ಶಬ್ದಗಳಲ್ಲಿ ಸೂಚಿಸಿ ಬಿಡುತ್ತಾನೆ. ಉದಾಹರಣಾರ್ಥ ಶ್ಲೋಕ ೫ ಮತ್ತು ೬ ರಲ್ಲಿ ಭೂಮಿ ಮೊದಲಾದ ಪೃಥ್ವಿಯ ೨೭ ಪರ್ಯಾಯವಾಚಿ ನಾಮಗಳನ್ನು ಹೇಳಿದ್ದಾನೆ. ಆಮೇಲೆ ೭ ನೆಯ ಶ್ಲೋಕದಲ್ಲಿ ಹೀಗೆ ವಿವರಿಸಿದೆ :-

ತತ್ಪರ್ಯಾಯಧರಃ ಶೈಲಃ ತತ್ಪರ್ಯಾಯಪದಿರ್ ನೃಪಃ ।

ತತ್ಪರ್ಯಾಯರುಹೋವೃಕ್ಷಃ ಶಬ್ದಮನ್ಯಚ್ಚ ಯೋಜಯೆತ್ ॥

ಈ ಪ್ರಕಾರ ಈ ಒಂದು ಶ್ಲೋಕದಿಂದ ಕೋಷಕಾರನು ಪರ್ವತ, ರಾಜ, ವೃಕ್ಷ ಇವುಗಳ ೨೭-೨೭ ಪರ್ಯಾಯವಾಚೀ ೮೧ ಹೆಸರುಗಳನ್ನು ಸೂಚಿಸಿಬಿಟ್ಟಿದ್ದಾನೆ. ಇದೇ ಪ್ರಕಾರ ೧೫ ನೆಯ ಶ್ಲೋಕದಲ್ಲಿ ಜಲದ ೧೮ ಹೆಸರುಗಳನ್ನು ಹೇಳಿ, ೧೬ ನೆಯ ಶ್ಲೋಕದಲ್ಲಿ ಆ ಹೆಸರುಗಳ ಜೊತೆಯಲ್ಲಿ ಚರವನ್ನು ಜೋಡಿಸಿದರೆ ಮತ್ಸ್ಯದ, ಜೋಡಿಸಿದರೆ ಘನ, ಜ ಜೋಡಿಸಿದರೆ ಪದ್ಮ ಮತ್ತು ಧರ ಜೋಡಿಸಿದರೆ ಸಮುದ್ರ, ಇವುಗಳ ೧೮-೧೮ ಹೆಸರುಗಳನ್ನು ನಿರ್ಮಿಸಿಕೊಳ್ಳುವ ಸೂಚನೆಯನ್ನು ಕೊಟ್ಟಿದ್ದಾನೆ. ಅನೇಕಾರ್ಥ ನಾಮಮಾಲಾದಲ್ಲಿ ಒಟ್ಟು ೪೬ ಶ್ಲೋಕಗಳಿವೆ. ಅವುಗಳಲ್ಲಿ ಸುಮಾರು ೬೦

ಶಬ್ದಗಳ ಅನೇಕಾರ್ಥಗಳನ್ನು ನಿರೂಪಣ ಮಾಡಿದ್ದಾನೆ.

ಜೈನ ಸಾಹಿತ್ಯದ ಈ ಸಂಕ್ಷಿಪ್ತ ಪರಿಚಯದಿಂದ ಇದು ಭಾರತೀಯ ಸಾಹಿತ್ಯವನ್ನು ಹೀಗೆ ಪುಷ್ಪಗೊಳಿಸಿದೆಯೆಂಬ ಸಂಗತಿಯು ಸ್ಪಷ್ಟವಾಗುತ್ತದೆ. ಈ ಸಾಹಿತ್ಯವು ಭಾರತೀಯ ವಾಙ್ಮಯ ಪ್ರವಾಹದೊಡನೆಯೂ ಹೊಂದಿಕೊಳ್ಳುತ್ತದೆ ; ಮತ್ತು ಭಾಷೆ, ಶೈಲಿ, ವಿಷಯ ಇವುಗಳ ವಿಷಯದಲ್ಲಿ ಮಹಾನ್ ವೈಶಿಷ್ಟ್ಯವನ್ನು ಕಾಯ್ದುಕೊಂಡಿದೆ. ಇದನ್ನು ಅರಿತುಕೊಳ್ಳದೆ ಹೋದರೆ ನಮ್ಮ ಜ್ಞಾನವು ಅಪೂರ್ಣವಾಗಿ ಉಳಿಯುತ್ತದೆ. ಜೈನ ಸಾಹಿತ್ಯವಂತೂ ಇನ್ನೂ ಪೂರ್ಣ ಪ್ರಕಟವಾಗಿಲ್ಲ ಅದನ್ನು ಅಭ್ಯಸಿಸಿದವರು ಕಡುಮೆಯೇ ಸರಿ. ಶಾಸ್ತ್ರ–ಭಂಡಾರಗಳಲ್ಲಿ ನೂರಾರು, ಆಶ್ಚರ್ಯದ ಸಂಗತಿಯಲ್ಲ ಸಾವಿರಾರು ಗ್ರಂಥಗಳು ಇನ್ನೂ ಪ್ರಕಟವಾಗಿದೆ ಉಳಿದಿವೆ. ಅವುಗಳ ಹೆಸರುಗಳೂ ಸಹ ಗೊತ್ತಿಲ್ಲದೆ ಹೋಗಿದೆ. ಪ್ರಕಾಶಿತ ಸಾಹಿತ್ಯದ ಆಲೋಚನಾತ್ಮಕ ಅಧ್ಯಯನ, ಅನುವಾದಾದಿ ಕ್ಷೇತ್ರಗಳಲ್ಲಿಯೂ ಸಹ ವಿದ್ವಾಂಸರು ಪ್ರಯತ್ನ ಮಾಡಲು ತುಂಬ ಅವಕಾಶವಿದೆ.

ಪ್ರಾಕೃತ ಭಾಷೆಗಳ–ಅರ್ಧಮಾಗಧಿ, ಶೌರಸೇನಿ, ಮಹಾರಾಷ್ಟ್ರೀ ಮತ್ತು ಅಪಭ್ರಂಶ–ಉಲ್ಲೇಖವು ಜೈನ ಸಾಹಿತ್ಯದ ಪರಿಚಯದಲ್ಲಿ ಯಥಾ ಸ್ಥಾನದಲ್ಲಿ ಬಂದಿದೆ. ಅಲ್ಲಿ ಅವುಗಳ ಸ್ವರೂಪವನ್ನೂ ವಿವರಿಸಿದೆ. ಅವುಗಳ ಕೆಲವೊಂದು ಸಾಹಿತ್ಯಕ ಅವತರಣಗಳನ್ನು ಅನುವಾದ ಸಹಿತ ಇಲ್ಲಿ ಕೊಡಲಾಗಿದೆ.

ಅವತರಣ_೧

ಅರ್ಧಮಾಗಧೀ–ಪ್ರಾಕೃತ

ಪುಚ್ಛಿಂಸು ಣಂ ಸಮಣಾ ಮಾಹಣಾ ಯ ಅಗಾರಿಣೋ ಯ ಪರತಿತ್ಥಿಯಾ ಯ।

ಸೆ ಕೇಇ ನೇಗನ್ತಹಿಯಂ ಧಮ್ಮಮಾಹು ಅಣೇಲಿಸಂ ಸಾಹು ಸಮಿಕ್ಖಯಾಏ ॥೧॥

ಕಹಂ ಚ ನಾಣಂ ಕಹ ದಂಸಣಂ ಸೇ ಸೀಲಂ ಕಹಂ ನಾಯಸುಯಸ್ಸ ಅಸಿ।

ಜಾಣಾಸಿ ಣಂ ಭಿಕ್ಖು ಜಹಾತಹೇಣಂ ಅಹಾಸುಯಂ ಬೂಹಿ ಜಹಾ ನಿಸಂತಂ ॥೨॥

ಖೇಯನ್ನಏ ಸೇ ಕುಸಲಾಸುಪನ್ನೇ ಅನಂತನಾಣೀ ಯ ಅನಂತದಂಸೀ ।

ಜಸಂಸಿಣೋ ಚಕ್ಖುಪಹೇ ಠಿಯಸ್ಸ ಜಾಣಾಹಿ ಧಮ್ಮಂ ಚ ಧಿಇಂ ಚ ಪೇಹಿ ॥೩॥

ಉಢ್ಢಂ ಅಹ ೀಯ ತಿರಿಯಂ ದಿಸಾಸು ತಸಾ ಯ ಜೆಥಾವರ ಜೆ ಯ ಪಾಣಾ ।

ಸೇ ನಿಚ್ಚನಿಚ್ಚೇಹಿ ಸ ಮಿಕ್ಖ ಪನ್ನೆ ೀ ದೀವೇ ವ ಧಮ್ಮಂ ಸಮಿಯಂ ಉದಹ ು ॥೪॥

ಸೆ ಸವ್ವದಂಸೀ ಅಭಿಭೂಯನಾಣೀ ನಿರಾಮಗಂಥೇ ಧಿಇಮಂ ಠಿಯಪ್ಪಾ ।

ಅಣುತ್ತರೇ ಸವ್ವಜಗಂಸಿ ವಿಜ್ಜಂ ಗಂಥಾ ಅಈಎ ಅಭುಎ ಅಣಾಊ ॥೫॥

ಸೇ ಭೂಇಪನ್ನೆ ೀ ಅಣೆಏಅಚಾರೀ ಓಹ ಂತರೇ ಧೀರೇ ಅಣಂತಚಕ್ಖೂ ।

ಅಣುತ್ತರಂ ತಪ್ಪಇ ಸೂರಿಎ ವಾ ವಇರೋಯಣೆಂದೆ ವ ತಮಂ ಪಣಾಸೇ ॥೬॥

(ಸೂಯಗಡಂ, ೧, ೬, ೧–೬)

(ಅನುವಾದ)

ಶ್ರಮಣ, ಬ್ರಾಹ್ಮಣ, ಗೃಹ ಸ್ಥಹ ಾಗೂ ಅನ್ಯ ಧರ್ಮಾವಲಂಬಿಗಳು (ಗಣಧರ ಸ್ವಾ ಮಿಗೆ) ಕೇಳಿದರು :– ಯಾವನು ಸುಂದರ ಸ ಮೀಕ್ಷಾಪೂರ್ವಕ ಈ ಸಂಪೂರ್ಣ ಹಿತಕಾರಿ, ಅಸಾಧರಣ ಧರ್ಮದ ಉಪದೇಶ ಮಾಡಿದಂಥವನು ಅವನು ಯಾರು ? ಈ ಧರ್ಮವನ್ನು ಉಪದೇಶಿಸಿದ ಜ್ಞಾತಪುತ್ರ (ಮಹ ಾವೀರ ನಿಗೆ ಎಂಥ ಜ್ಞಾನವಿತ್ತು ? ಎಂಥ ದರ್ಶನವಿತ್ತು ? ಮತ್ತು ಎಂಥ ಶೀಲ ವಿತ್ತು ? ಹೇ ಭಿಕ್ಷುವೆ, ನೀನು ಯಥಾರ್ಥ ರೂಪದಿಂದ ತಿಳಿದಿರು ವಿ ಹ ೀಗೆ ಕೇಳಿರು ಮಿರೋ ಮತ್ತುಹ ೀಗೆ ಧಾರಣ ಮಾಡಿರುಮಿರೋಹ ಾಗೆ ಹೇಳು. ಇದಕ್ಕೆ ಗಣಧರ ಸ್ವಾ ಮಿಯು ಹ ೇಳಿದನು :– ಆ ಭಗವಾನ್ ಮಹ ಾವೀರನು ಕ್ಷೇತ್ರಜ್ಞ (ಅರ್ಥಾತ್ ಆತ್ಮಾ ಮತ್ತು ವಿಶ್ವವನ್ನು ತಿಳಿದಂಥವನು) ಆಗಿದ್ದನು. ಕುಶಲ ಆಶುಪ್ರಜ್ಞ, ಅನಂತಜ್ಞಾನೀ ಮತ್ತು ಅನಂತದರ್ಶಿಯಾಗಿದ್ದನು. ಅವನು ಯಶಸ್ವೀ, ಸಾಕ್ಷಾತ್ ಅರಹ ಂತ ಅವಸ್ಥೆಯಲ್ಲಿದ್ದ ಭಗವಂತನಿಂದ ಉಪದೇಶಿಸಲ್ಪಟ್ಟ ಧರ್ಮ ಮತ್ತು ಧೃತಿ (ಸಂಯಮದಲ್ಲಿ ರತಿ) ಇವುಗಳನ್ನು ತಂದುಕೊಳ್ಳು ಮತ್ತು ತಿಳಿದುಕೊಳ್ಳು. ಊರ್ಧ್ವ, ಅಧಃಹ ಾಗೂ ಉತ್ತರ – ದಕ್ಷಿಣ ಮೊದಲ ಾದ ತಿರ್ಯಕ್ ದಿಶ ೆಗಳಲ್ಲಿ ಯಾವ ತ್ರಸ ಇಲ್ಲವೆ ಸ್ಥಾವರ ಜೀವ ವಿದೆಯೋ ಅವೆಲ್ಲದರ ನಿತ್ಯ – ಅನಿತ್ಯ ಗುಣ ಧರ್ಮಗಳ ಸ ಮೀಕ್ಷೆಯನ್ನು ಮಾಡಿ, ಆ ಜ್ಞಾನಿಯಾದ ಭಗವಂತನು ಸಮ್ಯಕ್ ಪ್ರಕಾರದಿಂದ ದೀಪಕದಂತೆ ಧರ್ಮವನ್ನು ಪ್ರಕಟಗೊಳಿಸಿದ್ದಾನೆ. ಆ ಭಗವಂತನು ಸರ್ವದರ್ಶಿ, ಜ್ಞಾನಿ, ನಿರಾಮಗಂಧ (ನಿಷ್ಪಾದ) ಧೃತಿಮಾನ್,

ಸ್ಥಿತಾತ್ಮಾ, ಸರ್ವ ಜಗತ್ತಿನಲ್ಲಿಯೂ ಅದ್ವಿತೀಯ ವಿದ್ವಾನ್, ಗ್ರಂಥಾತೀತ (ಅರ್ಥಾತ್ ಪರಿಗ್ರಹ ರಹಿತ ನಿರ್ಗ್ರಂಥ), ಅಭಯ ಮತ್ತು ಅನಾಯು (ಪುನರ್ ಜನ್ಮ ರಹಿತ) ಆಗಿದ್ದನು. ಅವನು ಭೂತಿಪ್ರಜ್ಞ (ದ್ರವ್ಯ – ಸ್ವಭಾವವನ್ನು ತಿಳಿಯುವಂಥವನು, ಅನಿಕೇತಚಾರೀ [ಗೃಹವನ್ನು ತ್ಯಜಿಸಿ ವಿಹಾರ ಮಾಡುವಂಥವನು] ಸಂಸಾರ ಸಮುದರವನ್ನು ದಾಟಿಸುವಂಥವನು, ಧೀರ ಅನಂತ ಚಕ್ಷು [ಅನಂತದರ್ಶಿ], ಅಸಾಧಾರಣ ರೂಪದಿಂದ ಅದೇ ಪ್ರಕಾರ ತಪ್ಪಾಯಮಾನ ಮತ್ತು ಅಂಧಕಾರದಲ್ಲಿ ಸೂರ್ಯ, ವೈರೋಚನ [ಅಗ್ನಿ] ಮತ್ತು ಇಂದ್ರರಂತೆ ಪ್ರಕಾಶಮಾನನಾಗಿದ್ದಾನೆ.

ಅವತರಣ – ೨

ಅರ್ಧಮಾಗಧೀ – ಪ್ರಾಕೃತ

ಕಮ್ಮಸಂಗೇಹಿ ಸಮ್ಮೂಢಾ ದುಕ್ಖಿಯಾ ಬಹುವೇಯಣಾ ॥

ಅಮಾಣಸಾಸು ಜೋಣೀಸು ವಿಣಿಹಮ್ಮಂತಿ ಪಾಣಿಣೋ ॥ ೧॥

ಕಮ್ಮಾಣಂ ತು ಪಹಾಣಾಏ ಆಣುಪುವ್ವೀ ಕಯಾಇ ಉ ।

ಜೀವಾ ಸೋಹಿಮಣುಪ್ಪತ್ತಾ ಆಯಯಂತಿ ಮಣುಸ್ಸಯಂ ॥ ೨ ॥

ಮಾಣುಸ್ಸಂ ವಿಗ್ಗಹಂ ಲದ್ಧುಂ ಸುಈ ಧಮ್ಮಸ್ಸ ದುಲ್ಲಹಾ ॥

ಜಂ ಸೋಚ್ಚಾ ಪಡಿವಜ್ಜಂತಿ ತವಂ ಖಂತಿಮಹಿಂಸಯಂ ॥ ೩ ॥

ಆಹಚ್ಚ ಸವಣಂ ಲದ್ಧುಂ ಸದ್ಧಾ ಪರಮದುಲ್ಲಹಾ ।

ಸೋಚ್ಚಾ ನೇಆಉಸಂ ಮಗ್ಗಂ ಬಹವೇ ಪರಿಭಸ್ಸ ಈ ॥ ೪ ॥

ಸುಇಂ ಚ ಲದ್ಧುಂ ಸದ್ಧರಿ ಚ ವೀರಿಯಂ ಪುಣ ಮಲ್ಲಹಂ ॥

ಬಹವೇ ರೋಯಮಾಣಾ ವಿ ನೊ ಯಜಂ ಪಡಿ ವಜ್ಜಏ ॥ ೫ ॥

ಮಾಣುಸತ್ತೆಮಿ ಆಯಾಉ ಜೋಧಮ್ಮಂ ಸೋಚ್ಚ ಸದ್ದಹೆ॥

ತಪಸ್ಸೀ ವೀರಿಯಂ ಲದ್ಧುಂ ಸಂವುಡೆ ನಿದ್ಧೊಣೆ ರಯಂ ॥ ೬ ॥

ಸೊಹೀ ಉಜ್ಜುಯಭೂಯಸ್ಸ ಧಮ್ಮೊಸುದ್ಧ ಚಿಟ್ಠ ಈ ।

ನಿವ್ವಾಣಂ ಪರಮಂ ಜಾಇ ಘಯಸಿತ್ತಿ ವ್ವ ಪಾವಎ ॥ ೭ ॥

(ಉತ್ತರಾಧ್ಯಯನ, ೩ – ೬ – ೧೨)

(ಅನುವಾದ)

ಕರ್ಮಗಳ ಸಂಸರ್ಗದಿಂದ ಮೋಹಿತವಾದ ಪ್ರಾಣಿಯು ದುಃಖಿ ಮತ್ತು ಬಹಳಷ್ಟು ವೇದನೆಗಳಿಂದ ಕೂಡಿದ್ದಾಗಿ ಅಮಾನುಷಿಕ (ಪಶು – ಪಕ್ಷೀ ಆದಿ ತಿರ್ಯಂಚ) ಯೋನಿಯಲ್ಲಿ ಮುಳುಗಿ ಹೋಗುತ್ತದೆ. ಪ್ರ್ಯ ವೇಳೆ ಆನುಪೂರ್ವಿಯಿಂದ ಕರ್ಮಗಳ ಕ್ಷೀಣತೆಯು ಆದಲ್ಲಿ ಜೀವವು ಶುದ್ಧಿಯನ್ನು ಹೊಂದಿ ಮನುಷ್ಯತ್ವವನ್ನು ಪಡೆಯುತ್ತದೆ. ಮನುಷ್ಯ ಶರೀರವನ್ನು ಹೊಂದಿಯೂ ಇಂಥ ಧರ್ಮಶ್ರಮಣವನ್ನು ಹೊಂದುವುದು ದುರ್ಲಭವಿದೆ. ಈ ಧರ್ಮವನ್ನು ಕೇಳುವುದರಿಂದ (ಜೀವವು) ಕ್ಷಮಾ, ಅಹಿಂಸಾ ಮತ್ತು ತಪವನ್ನು ಗ್ರಹಣ ಮಾಡುತ್ತದೆ. ಒಂದು ವೇಳೆ ಇಂಥ ಧರ್ಮ ಶ್ರವಣವು ದೊರೆತರೂ ಕೂಡ ಅದರಲ್ಲಿ ಶ್ರದ್ಧೆಯು ಉತ್ಪನ್ನವಾಗುವುದು ಪರಮ ದುರ್ಲಭವಾಗಿದೆ. ಅದಕ್ಕಾಗಿಯೇ ಬಹಳಷ್ಟು ಜನರು ಉದ್ಧಾರ ಹೊಂದುವಂಥ ಮಾರ್ಗವನ್ನು (ಧರ್ಮ) ಕೇಳಿಯೂ ಕೂಡ ಭ್ರಷ್ಟರಾಗಿ ಹೋಗುತ್ತಾರೆ. ಧರ್ಮ – ಶ್ರವಣವನ್ನು ಹೊಂದಿ, ಶ್ರದ್ಧೆಯನ್ನೂ ಪಡೆದ ಮೇಲೆಯೂ ವೀರ್ಯವು (ಧರ್ಮಾಚರಣದಲ್ಲಿ ಪುರಾಷಾರ್ಥವು) ದುರ್ಲಭವಿದೆ. ಬಹಳಷ್ಟು ಜೀವಗಳು ರುಚಿ (ಶ್ರದ್ಧಾಯನ್ನು) ಕಾಯ್ದುಕೊಂಡುವುಗಳಾಗಿದ್ದೂ ಸದಾಚಾರವನ್ನು ಸ್ವೀಕರಿಸಿರುವುದಿಲ್ಲ. ಮನುಷ್ಯಯೋನಿಯಲ್ಲಿ ಜನಿಸಿ ಯಾವನು ಧರ್ಮವನ್ನು ಶ್ರವಣ ಮಾಡುತ್ತಾನೆಯೋ ಮತ್ತು ಶ್ರದ್ಧೆಯನ್ನು ಇಡುತ್ತಾನೆಯೋ ಅಲ್ಲದೆ ತಪಸ್ವೀಯಾಗಿ ಪುರುಷಾರ್ಥದ ಲಾಭವನ್ನು ಸಾಧಿಸಿ ಆತ್ಮ – ಸವೃತ್ತನಾಗುತ್ತಾನೆಯೋ ಅವನು ಕರ್ಮ ರಜವನ್ನು ಕಳೆದುಕೊಳ್ಳುತ್ತಾನೆ. ಸರಳ – ಸ್ವಭಾವಿ ಪ್ರಾಣಿಗೇನೇ ಶುದ್ಧಿಯು ಪ್ರಾಪ್ತವಾಗುತ್ತದೆ. ಶುದ್ಧ

ಪ್ರಾಣಿಗೇನೇ ಧರ್ಮವು ಸ್ಥಿರವಾಗುತ್ತದೆ. ಅದೇ ಪರಮ ನಿರ್ವಾಣಕ್ಕೆ ತುಪ್ಪವನ್ನು ಸಿಂಪಡಿಸಲು ಅಗ್ನಿಯು ಮೆಲ ಿಹ ೋಗುವಂತೆಹ ೋಗುತ್ತದೆ.

ಅವತರಣ – ೩

ಶ ೌರಸೇನೀ ಪ್ರಾಕೃತ

ಣಾಣೀ ರಾಗಪ್ಪಜಹ ೋ ಸವ್ವದವ್ವೇಸು ಕಮ್ಮಮಜ್ಝಗದೋ ।

ಣೋ ಲಿಪ್ಪದಿ ಕಮ್ಮರಏಣ ದು ಕದ್ದಮಮಜ್ಝೇ ಜಹ ಾ ಕಣಯಂ ॥ ೧ ॥

ಅಣ್ಣಾಣೀ ಪುಣ ರತ್ತೋ ಸವ್ವದವ್ವೇಸು ಕಮ್ಮಮಜ್ಝಗದೋ ।

ಲಿಪ್ಪದಿ ಕಮ್ಮರಏಣ ದು ಕದ್ದ ಮಮಜ್ಝೇ ಜಹ ಾಲ ಿಹ ್ಂ ॥ ೨ ॥

ಣಾಗಫೇಏ ಮೂಲಂ ಣಾತಾಣಿ – ತೋಏಣ ಗಬ್ಭಣಾಗೇಣ

ಣಾಗಂಹ ೋಇ ಸುವಣ್ಣಂ ಧಮ್ಮತಂ ಭಚ್ಚವಾಏಣ ॥ ೩ ॥

ಕಮ್ಮಂಹ ್ವೇಇ ಕಿಟ್ಟಂ ರಾಗಾದೀ ಕಾಲಿಯಾ ಅಹ ್ ಋಾಓ ।

ಸಮ್ಮತ್ತಣಾಣಚರಣಂ ಪರಮೋಸಹ ್ವಿದಿ ಲಿಯಾಣಾಹಿ ॥ ೪ ॥

ಝಾಣಂಹ ್ವೇಇ ಅಗ್ಗೀ ತವಯರಣಂ ಭತ್ತಲೀ ಸಮಕ್ಖಾದೋ ।

ಜೀವೋಹ ್ವೇಇಲ ಿಹ ್ಂ ಧಮಿಯವ್ವೋ ಪರಮ – ಜೋಈಹಿ ॥ ೫ ॥

ಭುಜ್ಜಂ ತಸ್ಸ ವಿ ದವ್ವೇ ಸಚ್ಚಿತ್ತಾ ಚಿತ್ತಮಿಸ್ಸಿ ಏ ವಿಹ ಿ ।

ಸಂಖಸ್ಸ ಸೇದ ಭಾವೋ ಣವಿ ಸಕ್ಕದಿ ಕಿಣ್ಹಗೋ ಕಾದುಂ ॥ ೬ ॥

ತಹ ್ ಣಣಿಸ್ಸದ ದು ವಿಹ ೀ ಸಚ್ಚಿತ್ತಾಮಿಸ್ಸಿಏ ದವ್ವೇ ।

ಭುಜ್ಜಂ ತಸ್ಸ ವಿ ಸಾಣಂ ಸಕ್ಕದಿ ರಾಗದೋ (ಣಾಣದೋ) ಣೇದುಂ ॥ ೭ ॥

(ಅನುವಾದ)